ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಏಪ್ರಿಲ್ 2017 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 7
ಪುಟ : 12
ಬೆಲೆ : ₹ 10/–



ಶಿಕ್ಷಣ ತಪಸ್ವಿ, ಶಿಕ್ಷಕ ಸಂಘಗಳ ಹರಿಕಾರ, ಮುಕುಂದರಾವ್ ಕುಲಕರ್ಣಿ ಅವರಿಗೆ

# ಭಾವಪೂರ್ಣ ಶ್ರದ್ಧಾಂಜಲಿ

ಶಿಕ್ಷಕ ಸಂಘಟನೆಯ ದ್ರಷ್ಟಾರ ಮಾನ್ಯ ಮುಕುಂದರಾವ್ ಕುಲಕರ್ಣಿ 3

ಶಿಕ್ಷಣದಲ್ಲಿ ಭಾರತೀಯತೆ ! ಇಂದಿನ ಅವಶ್ಯಕತೆ 4

A Journal of Karnataka State Secondary Teachers' Association

# ಸಂಪಾದಕೀಯ

ಸಂಪಾದಕೀಯವನ್ನು ಬರೆಯಲು ಕುಳಿತುಕೊಳ್ಳುವ ವೇಳೆಗೆ ಶಿಕ್ಷಕ ಸಂಘಕ್ಕೆ ಆಘಾತಕಾರಿಯಾದ ಸುದ್ದಿ ಬರಸಿಡಿಲಿನಂತೆ ಬಂದೆರಗಿದೆ. ಅದೇ ಮುಕುಂದ್‌ರಾವ್ ಜೀಯವರು ಕೈಲಾಸವಾಸಿಗಳಾದ ವಿಷಯ. ಶ್ರೀ ಮುಕುಂದ್‌ರಾವ್ ಕುಲಕರ್ಣಿಯವರು ಮೂಲತಃ ಶಿಕ್ಷಕರು, ಶಿಕ್ಷಣ ವೇತ್ತರು, ಶಿಕ್ಷಕ ಸಂಘಗಳ ಸಂಘಟಕರು. (ABRSM) ಅಖಿಲ ಭಾರತೀಯ ಶೈಕ್ಷಿಕ ಸಂಘವನ್ನು ಕಟ್ಟುವುದರಲ್ಲಿ ಮುಕುಂದ್‌ರಾವ್ ಜೀಯವರ ಪಾತ್ರವೇ ಮುಖ್ಯವಾದುದು. ಶಿಕ್ಷಕ ಸಂಘದ ನೇತಾರರಾದ ಮುಕುಂದ್‌ರಾವ್ ಜೀಯವರು ಇಂದು ಕಣ್ಮರೆಯಾಗಿದ್ದರೂ ಅವರ ಆದರ್ಶಗಳು ನಮ್ಮೊಂದಿಗೆ ಸದಾಕಾಲ ಇರುತ್ತದೆ. ಶ್ರೀಯುತ ಮುಕುಂದ್‌ರಾವ್ ಕುಲಕರ್ಣಿಯವರ ಸ್ಮರಣಾರ್ಥವಾಗಿ ಈ ಸಂಚಿಕೆಯನ್ನು ಅವರಿಗೆ ಸಮರ್ಪಿಸೋಣ.

ಭಾರತ ಹಲವಾರು ಪುಣ್ಯಪುರುಷರಿಗೆ, ಸಾಧಕರಿಗೆ ಜನ್ಮನೀಡಿದ ಶ್ರೇಷ್ಠ ನಾಡು. ಎಲ್ಲಾ ಮಹನೀಯರು ಸಮಾಜದ ಹಿತಕ್ಕಾಗಿ, ಏಳಿಗೆಗಾಗಿ, ಆ ಮೂಲಕ ಜನ ಸಾಮಾನ್ಯರ ಕಷ್ಟ-ಕಾರ್ಪಣ್ಯ; ದುಃಖ ದುಮ್ಮಾನಗಳನ್ನು ಹೋಗಲಾಡಿಸಲು ತಮ್ಮ ಸ್ವಂತ ಜೀವನ, ಸುಖವನ್ನು ತ್ಯಜಿಸಿ ಸಾಧನೆ ಮಾಡಿದವರು. ಇವರೆಲ್ಲರೂ ಚಿರಸ್ಮರಣೀಯರು, ಸದಾಕಾಲ ಈ ಮಹನೀಯರುಗಳನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಆ ಮೂಲಕ ನಮ್ಮ ಬಾಳನ್ನು ಸುಂದರವನ್ನಾಗಿಸಿಕೊಳ್ಳಲು ಪ್ರಯತ್ನಿಸಬೇಕು.

ಆಚಾರ್ಯತ್ರಯರಾದ ಶ್ರೀ ರಾಮಾನುಜರು, ಶಂಕರರು, ಮಧ್ವರು ತಮ್ಮ ತತ್ತ್ವ, ಸಿದ್ಧಾಂತಗಳ ಮೂಲಕ ಜನರ ಧಾರ್ಮಿಕ, ಜೀವನ ಹಸನುಗೊಳಿಸಲು ಪ್ರಯತ್ನಿಸಿದರು. ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ ಪ್ರಖ್ಯಾತರಾದರು. 120 ವರ್ಷಗಳ ಕಾಲ ಜೀವಿತ ಅವಧಿಯಲ್ಲಿ ರಾಮಾನುಜರು ಮನುಷ್ಯನ ಜೀವನ ಹೇಗಿರಬೇಕೆಂದು ತೋರಿಸಿಕೊಟ್ಟರು. ಈ ವರ್ಷ ಮೇ 1 ರಂದು ಶ್ರೀ ರಾಮಾನುಜರ ಸಹಸ್ರವರ್ಷಾಚರಣೆಯ ಜಯಂತಿ. ಅವರ ಆದರ್ಶ, ತತ್ತ್ವಗಳು ವಿಶಿಷ್ಟಾದ್ವೈತಗಳಿಗಷ್ಟೇ ಅಲ್ಲ, ಎಲ್ಲರಿಗೂ ಅನುಸರಣಿಯವೇ ಆತುವೆ.

ಆಚಾರ್ಯತ್ರಯರಲ್ಲಿ ಮತ್ತೊಬ್ಬರಾದ ಶ್ರೀ ಶಂಕರಾಚಾರ್ಯರು ಜೀವಿಸಿದ್ದು ಕೇವಲ 32 ವರ್ಷಗಳು ಮಾತ್ರ. ಆದರೆ ಅವರ ಸಾಧನೆ ಎಣೆ ಇಲ್ಲದ್ದು. ದ್ವೈತ ತತ್ತ್ವವನ್ನು ಪ್ರತಿಪಾದಿಸಿದುದೇ ಅಲ್ಲದೆ, ಧಾರ್ಮಿಕ, ತಾತ್ವಿಕ ಗ್ರಂಥಗಳನ್ನು ರಚಿಸಿ ಸನಾತನ ಧರ್ಮದ ವಿಶಿಷ್ಟತೆಯನ್ನು ತೋರಿಸಿದರು. ಶಂಕರರು ಮನುಷ್ಯನ ಜೀವನ ಹೇಗಿರಬೇಕೆಂದು ಬೋಧಿಸಿದರು. ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ಸಾತ್ವಿಕ ಗುಣಗಳಿಂದ ಜೀವನ ಶೋಭಿಸಬೇಕು ಎಂದು ತಿಳಿಸಿದರು. ಏಪ್ರಿಲ್ 30 ಶ್ರೀ ಶಂಕರಾಚಾರ್ಯರ ಜಯಂತಿ. ಇವರ ಬೋಧನೆಗಳು ನಮಗೆ ಆದರ್ಶವೇ ಸರಿ.


ಕ್ರಿ.ಶ 12ನೆಯ ಶತಮಾನ ಕಂಡ ವಿಶಿಷ್ಟ ವ್ಯಕ್ತಿ ಬಸವೇಶ್ವರರು. ಬಸವಣ್ಣನವರು ಸಾಮಾಜಿಕ, ರಾಜಕೀಯ, ಧಾರ್ಮಿಕ ಸಾಹಿತ್ಯ ಕ್ಷೇತ್ರಗಳಲ್ಲಿ ಸುಧಾರಣೆಯನ್ನು ತರುವ ಪ್ರಯತ್ನ ಮಾಡಿದರು. ಬಸವಣ್ಣನವರ ಸರಳ, ಸುಂದರ ವಚನಗಳು ಸಮಾಜವನ್ನು ಜನರ ನಡವಳಿಕೆಗಳನ್ನು, ಆಚರಣೆಗಳನ್ನು ಸಮರ್ಥವಾಗಿ ತಿದ್ದಲು ಸಾಧ್ಯವಾಯಿತು. ಹಾಗಾಗಿ ಬಸವಣ್ಣನವರು, ಅವರ ವಚನಗಳು ಎಂದೆಂದಿಗೂ ಜನ ಮನದಲ್ಲಿ ನೆಲೆಸಿರುವುದರಲ್ಲಿ ಸಂದೇಹವಿಲ್ಲ. ಏಪ್ರಿಲ್ 29 ರಂದು ಈ ಮಹನೀಯರ ಜಯಂತಿಯನ್ನು ಅವರ ಸಿದ್ಧಾಂತಗಳು, ತತ್ವಗಳನ್ನು ಆಚರಣೆಗೆ ತರಲು ಪ್ರಯತ್ನಿಸುವ ಮೂಲಕ ಆಚರಿಸೋಣ.

'ಜಗವೆಲ್ಲ ಮಲಗಿರಲು ಎದ್ದವನು ಬುದ್ಧ'. ಬುದ್ಧ ಸಾಧನೆಗಾಗಿ ಹೊರಟದ್ದು ಮಧ್ಯ ರಾತ್ರಿಯಲ್ಲಿ, ಜಗತ್ತೆಲ್ಲ ಮಲಗಿದ್ದುದು ವಾಚ್ಯವಾಗಿ ಮಾತ್ರವಲ್ಲ, ಜಗತ್ತಿನ ಸಮಸ್ಯೆಗಳಿಗೆ ಎಲ್ಲರೂ ಕುರುಡಾಗಿದ್ದ ಸಮಯದದಲ್ಲಿ, ಸಿದ್ಧಾರ್ಥ ದೃಢತೆಯಿಂದ ಎದ್ದು ಹೊರಟ. ಧ್ಯಾನ ನಿರತರಾಗಿ ಅನೇಕ ವರ್ಷಗಳು ಕಳೆದ ನಂತರ ಕಂಡುಕೊಂಡ ಸತ್ಯ ಆಸೆಯೇ ದುಃಖಕ್ಕೆ ಕಾರಣ ಎಂದು. ಅನಂತರ ಕೇವಲ ಸನ್ಯಾಸಿಯಾಗಿಯೇ ಉಳಿಯದೆ ಜನರ ದುಃಖ ಶಮನ ಮಾಡಲು ಬೋಧಿಸಿದ. ಸಮಸ್ಯೆಗಳಿಗೆ ಪರಿಹಾರ ನೀಡಿದ. ಇಂತಹ ವಿಶೇಷ ವ್ಯಕ್ತಿತ್ವದ ಬುದ್ಧ ಜಯಂತಿ ಮೇ 10 ರಂದು ಆಚರಿಸಿ ಸುಖ, ನೆಮ್ಮದಿ ಪಡೆಯೋಣ.

ಕುಟುಂಬ ಸಮಾಜದ ಅವಿಭಾಜ್ಯ ಅಂಗ. ಮಗುವಿನ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಕುಟುಂಬದ ಪಾತ್ರ ಮಹತ್ತರವಾದುದು. ಹಿಂದೆ ಅವಿಭಕ್ತ ಕುಟುಂಬದಡಿಯಲ್ಲಿ ಎಲ್ಲರೂ ಒಂದೇ ಸೂರಿನಲ್ಲಿ ಬಾಳುತ್ತಿದ್ದರು. ಕ್ರಮೇಣ ವಿಭಕ್ತ ಕುಟುಂಬದ ಪ್ರಭಾವ ಹೆಚ್ಚಾಗಿ ಈಗ ಎಲ್ಲೆಡೆಯೂ ಚಿಕ್ಕ ಕುಟುಂಬಗಳೇ. ಇಂತಹ ಸಂದರ್ಭದಲ್ಲಿ 'ಅಂತರ ರಾಷ್ಟ್ರೀಯ ಕುಟುಂಬ ದಿನ' ಆಚರಿಸುವ ಅಗತ್ಯತೆ ತುಂಬ ಇದೆ. ಮೇ 15 ಅಂತರ ರಾಷ್ಟ್ರೀಯ ಕುಟುಂಬ ದಿನ. ಅಂದು ನಮ್ಮ ಕುಟುಂಬದವರೆಲ್ಲಾ ಒಟ್ಟಾಗಿ ಅವಿಭಕ್ತ ಕುಟುಂಬದ ಮಹತ್ತ್ವವನ್ನು ಅರಿತು, ಮುಂದಿನ ಪೀಳಿಗೆಗೂ ಪರಿಚಯಿಸೋಣ.

ಸಂಪಾದಕರು

## ಸೂಕ್ತಿ



ನ ಬುಧ್ಯತಿ ಗುರೋರ್ವಾಕ್ಯಂ ವಿನಾ
ವಿಶಿಸ್ಯ ಮಾನಸಂ।
ತೇ ಜೋವಿನಾ ಸಹಸ್ರಾಂಶೋಃಕಥಂ
ಸ್ಫುರತಿ ಪಂಕಜಮ್॥

ಸೂರ್ಯನ ಕಿರಣಗಳು ಜೀಳದ ಹೊರತು ಕಮಲವು ಹೇಗೆ ಅರಳದೋ ಅದರಂತೆ ಸದ್ಗುರುವಿನ ಸದ್ವಚನಗಳ ಹೊರತು ಶಿಷ್ಯನ ಮನಸ್ಸಿಗೆ ಬೋಧೆಯುಂಟಾಗದು. ಸರೋವರದಲ್ಲಿರುವ ಕಮಲಗಳನ್ನು ಅರಳಿಸುವ ಶಕ್ತಿ ಸೂರ್ಯ ಕಿರಣಗಳಲ್ಲಿ ಮಾತ್ರ ಇರುವಂತೆ, ಶಿಷ್ಯನ ಹೃದಯ ಕಮಲ ಅರಳಿಸುವ ಶಕ್ತಿ ಗುರುವಿನ ಜ್ಞಾನ ಕಿರಣಗಳಲ್ಲಿವೆ. ಆದ್ದರಿಂದ ಸರ್ವರೂ ಗುರೂಪದೇಶಕ್ಕೆ ಮೊರೆ ಹೋಗಬೇಕು.

- ಶ್ರೀ ಸಿದ್ಧಾಂತಶಿಖಾಮಣಿ

## ಪರಿವಿಡಿ


- ಶಿಕ್ಷಕ ಸಂಘಟನೆಯ ದ್ರಷ್ಟಾರ ಮಾನ್ಯ ಮುಕುಂದರಾವ್ ಕುಲಕರ್ಣಿ 3
- ಶಿಕ್ಷಣದಲ್ಲಿ ಭಾರತೀಯತೆ ! ಇಂದಿನ ಅವಶ್ಯಕತೆ 4
- ಶಿಕ್ಷಣ ಆಯೋಗಗಳು 5
- ಕುಟುಂಬದ ಕೇಂದ್ರ ಬಿಂದು ಸ್ತ್ರೀ 6
- ಶಿಕ್ಷಕರಿಗೆ ಜೈಲು ಶಿಕ್ಷೆ ಖಂಡನೀಯ 7
- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ 7
- ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣಸಂಸ್ಥೆಗಳ ಪಾತ್ರ 8
- ನುಡಿ ನಮನ 9
- ಕ್ಯಾಲೆಂಡರ್ ಬಿಡುಗಡೆ 12

# ಶಿಕ್ಷಕ ಸಂಘಟನೆಯ ದ್ರಷ್ಟಾರ ಮಾನ್ಯ ಮುಕುಂದರಾವ್ ಕುಲಕರ್ಣಿ

**ಶ್ರೀ ಕೃ. ನರಹರಿ**
(ಸಂರಕ್ಷಕರು, ABRSM)



ಶ್ರೀ ಮುಕುಂದ ರಾವ್ ಕುಲಕರ್ಣಿಯವರು 1917ರ ಏಪ್ರಿಲ್ 3 ರಂದು ತಮ್ಮ 90ನೇ ವಯಸ್ಸಿನಲ್ಲಿ ಪೂನಾದ ಸ್ವಗೃಹದಲ್ಲಿ ಸ್ವರ್ಗಸ್ಥರಾದರಷ್ಟೇ. ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಹಾಗೂ ಭಾರತೀಯ ಶಿಕ್ಷಣ ಮಂಡಲಗಳ ಹುಟ್ಟಿಗೆ ಪ್ರೇರಕಶಕ್ತಿಯಾಗಿದ್ದ ಇವರು 1958ರಲ್ಲಿ ವಾಮಪಂಥೀಯ ಪ್ರೇರಿತ ಎಲ್ಲ ಸ್ತರದ ಶಿಕ್ಷಕರ ಸಂಘಟನೆಯೊಂದಿಗೆ ಜೋಡಿಸಿಕೊಂಡರು. 1960 ರಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣದ ಶಿಕ್ಷಕರ ಸಂಘಟನೆಗಳು ಪ್ರತ್ಯೇಕಗೊಂಡಾಗ ಮಾಧ್ಯಮಿಕ ಶಿಕ್ಷಕರಾದ ಇವರು All India Secondary Teachers Federation (AISTF) ನೊಡನೆ ಸೇರಿಕೊಂಡರು. ಇಲ್ಲಿ ಕೆಲಸ ಮುಂದುವರೆಸಲು ಇವರು ಪ.ಪೂ. ಗುರೂಜಿಯವರ ಆಶೀರ್ವಾದವನ್ನೂ ಸಹ ಪಡೆದಿದ್ದರು. AISTF ನ ಮೊದಲ ಕಾರ್ಯಕಾರಿ ಸಮಿತಿಗೆ ಮಾನ್ಯ ಮುಕುಂದರಾಯರನ್ನು ಸೇರಿಸಿಕೊಳ್ಳಲಾಯಿತು. (ಆಗ ಮಾನ್ಯ ಮುಕುಂದರಾಯರ ಹಿನ್ನೆಲೆ ಸಂಬಂಧಿಸಿದವರಿಗೆ ತಿಳಿದಿರಲಿಲ್ಲ)

ಶ್ರೀ ಮುಕುಂದರಾಯರು ಅನ್ಯಾನ್ಯ ರಾಜ್ಯಗಳಲ್ಲಿ ರಾಷ್ಟ್ರೀಯ ದೃಷ್ಟಿಯನ್ನೂ ಹೊಂದಿದ್ದ ಶಿಕ್ಷಕ ಸಂಘಟನೆಗಳನ್ನು AISTF ನೊಡನೆ ಜೋಡಿಸಿದರು. ಕರ್ನಾಟಕದಂತಹ ಶಿಕ್ಷಕ ಸಂಘಟನೆ ಇಲ್ಲದ ರಾಜ್ಯಗಳಲ್ಲಿ ರಾಷ್ಟ್ರೀಯ ದೃಷ್ಟಿಯ ಹೊಸ ಶಿಕ್ಷಕ ಸಂಘಟನೆಯ ಹುಟ್ಟಿಗೂ ಪ್ರೇರೇಪಿಸಿದರು. ಇವನ್ನೂ AISTF ನೊಡನೆ ಜೋಡಿಸಿದರು. ಈ ಸಮಯದಲ್ಲೇ ಕರ್ನಾಟಕದಲ್ಲೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಪ್ರಾರಂಭವಾಗಿದ್ದು, ಬರುಬರುತ್ತಾ ಇವರ ಪ್ರಯತ್ನದಿಂದ AISTF ನಲ್ಲಿ ರಾಷ್ಟ್ರೀಯ ದೃಷ್ಟಿಯ ಶಿಕ್ಷಕ ಸಂಘಟನೆಗಳ ಪ್ರಾಬಲ್ಯವೂ ಹೆಚ್ಚಾಗತೊಡಗಿತು. ಜೊತೆಯಲ್ಲೇ AISTF ನಲ್ಲಿ ವಾಮಪಂಥೀಯರು ಮತ್ತು ರಾಷ್ಟ್ರೀಯ ದೃಷ್ಟಿಕೋನದ ಶಿಕ್ಷಕರ ಮಧ್ಯೆ ಕಾರ್ಯಕಾರಿ ಸಮಿತಿಯಲ್ಲಿ ತಿಕ್ಕಾಟವೂ ಹೆಚ್ಚಾಯಿತು. ಆದರೆ ಶ್ರೀ ಮುಕುಂದರಾಯರ ವ್ಯಕ್ತಿತ್ವ, ತಾಳ್ಮೆ ಬುದ್ಧಿವಂತಿಕೆಗಳು ಸಂಘಟನೆಯನ್ನು ನಿಭಾಯಿಸಿಕೊಂಡು ಹೋದವು. ಆದರೆ 1999ರಲ್ಲಿ ಎರಡೂ ಬಣಗಳು ಪ್ರತ್ಯೇಕವಾಗಿಬಿಟ್ಟವು.

ಆದರೆ ದೂರದೃಷ್ಟಿಯ ಶ್ರೀ ಮುಕುಂದರಾಯರು 1988ರಲ್ಲಿ ಪ್ರಾಥಮಿಕ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣದ ರಾಷ್ಟ್ರೀಯ ದೃಷ್ಟಿಹೊಂದಿದ ಶಿಕ್ಷಕರನ್ನು ಭೂಪಾಲ್‌ನಲ್ಲಿ ಸೇರಿಸಿದರು. ರಾಷ್ಟ್ರೀಯ ದೃಷ್ಟಿಯುಳ್ಳ ಎಲ್ಲ ಸ್ತರದ ಶಿಕ್ಷಕರನ್ನೊಳಗೊಂಡ ಶಿಕ್ಷಕರ ಪ್ರತ್ಯೇಕ ಸಂಘಟನೆಯ ಪ್ರಾರಂಭವನ್ನೂ ಮನದಟ್ಟುಮಾಡಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ABRSM)ದ ಪ್ರಾರಂಭಕ್ಕೆ ಕಾರಣಕರ್ತರಾದರು. ಅವರೇ ಇದರ ಮೊದಲ ಪ್ರಧಾನ ಕಾರ್ಯದರ್ಶಿಗಳಾಗಿ ನನಗೆ ಅಧ್ಯಕ್ಷತೆಯ ಜವಾಬ್ದಾರಿ ವಹಿಸಿದರು.

AISTF ನಲ್ಲಿ ವಾಮಪಂಥೀಯರ ಮಾನಸಿಕತೆ ಕೇವಲ 'trade unionism' ಆಗಿದ್ದಿತು. ಶಿಕ್ಷಣ, ಶಿಕ್ಷಕರ ಕರ್ತವ್ಯ, ಬದ್ಧತೆಗಳು, ಮೌಲ್ಯ ನಿರ್ಮಾಣ, ಸೇವಾದೃಷ್ಟಿ ಇತ್ಯಾದಿ ಘನಾತ್ಮಕ ಜವಾಬ್ದಾರಿಗಳ ಬಗ್ಗೆ ವಾಮಪಂಥೀಯರ ಸ್ಪಷ್ಟ ವಿರೋಧವಿತ್ತು. ಆದರೂ 1990ರ ದಶಕದಲ್ಲಿ ಶಿಕ್ಷಕರು ಸೇವಾ ಕಾರ್ಯಗಳಲ್ಲೂ ತೊಡಗಬೇಕೆಂದು AISTF ನ ಕಾರ್ಯಕಾರಿಣಿಯಲ್ಲಿ ನಿಶ್ಚಯಿಸಲು ಮುಕುಂದರಾಯರು ಯಶಸ್ವಿಯಾದರೂ (ಎಲ್ಲರಲ್ಲೂ ಇದು ಕಾರ್ಯಗತ ಆಗಲಿಲ್ಲ)

ಮಾನ್ಯ ಮುಕುಂದರಾಯರು ABRSM ನ ಸಂವಿಧಾನ, ನೋಂದಣಿ, ಸಂಘಟನೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ, ಉನ್ನತ ಶಿಕ್ಷಣ, ಮಹಿಳಾ ಮತ್ತು ಶಿಕ್ಷಕೇತರ ಪ್ರಕೋಷ್ಠಗಳ ಪ್ರಾರಂಭ ಹಾಗೂ ಅವುಗಳ ಪದಾಧಿಕಾರಿಗಳು, ಜವಾಬ್ದಾರಿ ಇತ್ಯಾದಿ ಎಲ್ಲ ಅಂಶಗಳ ಬಗ್ಗೆ ಮಾರ್ಗದರ್ಶನ ಮಾಡಿದರು.

ಮಾನ್ಯ ಮುಕುಂದರಾಯರ 75 ನೇ ವಯಸ್ಸಿನಲ್ಲಿ, ಕಷ್ಟಪಟ್ಟು ಅವರನ್ನು ಒಪ್ಪಿಸಿ ABRSM ನ ಕೇಂದ್ರ ಕಛೇರಿಗೆ ದೆಹಲಿಯಲ್ಲಿ ಒಂದು ಕಟ್ಟಡವನ್ನೂ ಕೊಳ್ಳಲು ಅಗತ್ಯ ಧನ ಸಂಗ್ರಹವನ್ನು ಮಾಡಲಾಯಿತು. ಪರಿಣಾಮವಾಗಿ ಈಗಿನ ABRSM ನ ದೆಹಲಿಯ ಸ್ವಂತ ಕೇಂದ್ರ ಕಾರ್ಯಾಲಯ 'ಶೈಕ್ಷಿಕ ಸಂಘ ಭವನ'ದಲ್ಲಿ ಶಿಕ್ಷಕ ಸಂಘದ ಚಟುವಟಿಕೆಗಳು ಪ್ರಾರಂಭವಾದುವು.


ಮಾನ್ಯ ಮುಕುಂದರಾಯರ ಕಾಲದಲ್ಲೇ ಹಲವರೊಡನೆ ಚರ್ಚಿಸಿದ ನಂತರ ಘೋಷವಾಕ್ಯ "ರಾಷ್ಟ್ರ ಕೇ ಲಿಯೇ ಶಿಕ್ಷಾ, ಶಿಕ್ಷಾ ಕೇ ಲಿಯೇ ಶಿಕ್ಷಕ್, ಶಿಕ್ಷಕ್ ಕೇ ಲಿಯೇ ಸಮಾಜ" ದ ನಿರ್ಣಯ ಮಾಡಲಾಯಿತು.

ಮಾನ್ಯ ಮುಕುಂದರಾಯರು ಯಾವ ರಾಜ್ಯದವರು ಪ್ರವಾಸಕ್ಕೆ ಕರೆದರೂ ಕೂಡಲೇ ತಮ್ಮ ಪ್ರವಾಸವನ್ನು ಕೊಡುತ್ತಿದ್ದರು. ಸ್ವತಃ ಪ್ರವಾಸದ ಯೋಜನೆಯನ್ನೂ ತಯಾರಿಸಿ ಅವಿರತ ಪರಿಶ್ರಮದಿಂದ ಸಂಘಟನೆಯ ವಿಸ್ತಾರಕ್ಕೆ ಪ್ರಮುಖ ಕಾರಣಕರ್ತರಾಗಿದ್ದಾರೆ. ಇದರ ಪರಿಣಾಮ ಈಗ ABRSM ಸುಮಾರು 8 ಲಕ್ಷ ಸದಸ್ಯರ ಬೃಹತ್ ಸಂಘಟನೆಯಾಗಿದೆ.

ಪುಟ 10 ಕ್ಕೆ ➤

# ಶಿಕ್ಷಣದಲ್ಲಿ ಭಾರತೀಯತೆ ! ಇಂದಿನ ಅವಶ್ಯಕತೆ

**ಚಿಕ್ಕಸ್ವಾಮಿ**
**ಅಧ್ಯಕ್ಷರು,**
**ಜಿಲ್ಲಾ ಮಾಧ್ಯಮಿಕ ಶಿಕ್ಷಕ ಸಂಘ,**
**ಮಂಡ್ಯ ಜಿಲ್ಲೆ, ಮಂಡ್ಯ.**



ಪ್ರಾಚೀನ ಕಾಲದಿಂದಲೂ ಭಾರತೀಯ ಶಿಕ್ಷಣ ಪದ್ಧತಿಯು ಅತ್ಯುತ್ತಮವಾದುದೆಂದು, ಅದು ಮಾನವನ ದೇಹ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನುಂಟು ಮಾಡಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣ ವಾಗಿತ್ತೆಂಬುದು ವೇದ್ಯ ಸಂಗತಿ.

ಜನಪದದಂತೆಯೇ ಬಾಯಿಂದ ಬಾಯಿಗೆ ಹರಿದು ಬಂದ ವೇದ ವಾಙ್ಮಯಗಳು, ಅರ್ಥಸಹಿತವಲ್ಲದಿದ್ದರೂ, ಕಂಠಪಾಠ ಮಾಡುವ ಅಭ್ಯಾಸ ನಡೆದು ಬರುತ್ತಿದ್ದು, ತದನಂತರ ಅದು ಗುರುಕುಲಗಳಾಗಿ ಮಾರ್ಪಟ್ಟು ಜೀವನ ಕೌಶಲಗಳನ್ನು ಕಲಿಸುವ ಪರಿಪಾಠ ಬೆಳೆದುಬಂತು. ಶ್ರೀ ಕೃಷ್ಣ ಬಲರಾಮ ಕುಚೇಲರು ಒಂದೇ ಗುರುಕುಲದಲ್ಲಿ ಶಿಕ್ಷಣ ಅಭ್ಯಾಸ ಮಾಡುತ್ತಿದ್ದುದು ಅಲ್ಲಿ ಸಮಾನತೆಯ ಶಿಕ್ಷಣಕ್ಕೊಂದು ಸ್ಪಷ್ಟ ಉದಾಹರಣೆ.

ಗುರುಕುಲದಲ್ಲಿ 64 ವಿದ್ಯೆಗಳನ್ನು ಕಲಿಸುತ್ತಿದ್ದು ಅವುಗಳಲ್ಲಿ ಕಳ್ಳತನವೂ ಸಹ ಒಳಗೊಂಡಿದ್ದುದು ಕೌಶಲಗಳ ಕಲಿಕೆ ಛಾತ್ರರನ್ನು ತಮ್ಮ ಜೀವನ ಸಾಗಿಸುವ ಸ್ವಾವಲಂಬಿ ವಿದ್ಯಾರ್ಥಿಗಳನ್ನು ರೂಪಿಸಲಾಗುತ್ತಿತ್ತು.

ರಾಮಾಯಣದಲ್ಲಿ ಅತ್ಯಂತ ಚಿಕ್ಕ ವಯಸ್ಸಿಗೇ ಶ್ರೀರಾಮ ಸಕಲ ವಿದ್ಯಾಪಾರಂಗತನಾಗಿದ್ದು, ಯಜ್ಞ ಆಚರಣೆಗೆ ರಾಕ್ಷಸರ ಅಡಚಣೆ ನಿವಾರಣೆಗೆ ಕರೆದುಕೊಂಡು ಹೋಗಿದ್ದುದು ಒಂದು ಉತ್ತಮ ನಿದರ್ಶನ.

ಪ್ರಹ್ಲಾದ, ಅಭಿಮನ್ಯು ಇವರ ಬೆಳವಣಿಗೆ ಮತ್ತು ಕಲಿಕೆಯು ಗರ್ಭದಲ್ಲಿದ್ದಾಗಲೇ ನಡೆಯುತ್ತಿದ್ದುದು ಬೌದ್ಧಿಕ ಬೆಳವಣಿಗೆಯ ಪರಾಕಾಷ್ಠೆಗೆ ಒಂದು ಸ್ಪಷ್ಟ ನಿದರ್ಶನ.

ಇನ್ನು ಇತಿಹಾಸಕ್ಕೆ ಬಂದು ನೋಡುವುದಾದರೆ ನಳಂದ ಮತ್ತು ತಕ್ಷಶಿಲೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ದೇಶ ವಿದೇಶಗಳಿಂದ ಬಂದು ವ್ಯಾಸಂಗ ಮಾಡುತ್ತಿದ್ದುದು ಭಾರತೀಯ ಶಿಕ್ಷಣದ ಪ್ರಾಮುಖ್ಯತೆ ಮತ್ತು ಅಂದಿನ ಜನಪ್ರಿಯತೆಯನ್ನು ತೋರಿಸುತ್ತದೆ.

ಮೆಕೆವಲ್ಲಿಯ ಶಿಫಾರಸ್ಸಿನ ಶಿಕ್ಷಣ ಇಂದು ಭಾರತಕ್ಕೆ ಮಾತ್ರವಲ್ಲದೆ, ಇಂಗ್ಲೆಂಡಿಗೂ ಪ್ರಸ್ತುತವಲ್ಲ. ಅವುಗಳಿಗೇ ಏಕೆ ಯಾವ ರಾಷ್ಟ್ರಕ್ಕೂ ಅಗತ್ಯವಿಲ್ಲ. ಬದಲಾದ ಸನ್ನಿವೇಶದಲ್ಲಿ ಇಂಗ್ಲೆಂಡನ್ನೂ ಒಳಗೊಂಡಂತೆ ಎಲ್ಲಾ ರಾಷ್ಟ್ರಗಳು ತಮ್ಮ ಶಿಕ್ಷಣ ವ್ಯವಸ್ಥೆ ಹೇಗಿರಬೇಕೆಂದು ಭವಿಷ್ಯದ ದೃಷ್ಠಿಯನ್ನು ಮುಂದಿಟ್ಟುಕೊಂಡು ಅಳವಡಿಸಿಕೊಂಡಿವೆ. ಆದರೆ ಭಾರತ ಮಾತ್ರ ಇನ್ನೂ ಅಪ್ರಯೋಜಕವಾದ, ದೇಶಭಕ್ತಿಯನ್ನು ಮೂಡಿಸದ, ತನ್ನ ಬದುಕನ್ನು ರೂಪಿಸಿಕೊಳ್ಳದ ಪರಾವಲಂಬಿ ಶಿಕ್ಷಣವನ್ನೇ ಅನುಸರಿಸಿಕೊಂಡು ಬರುತ್ತಿರುವುದು ದುರ್ದೈವದ ಸಂಗತಿ.

ವಿಶ್ವಕ್ಕೆ ಭಾರತೀಯ ಶಿಕ್ಷಣ, ಭಾರತೀಯ ವಿದ್ಯಾವಂತ ಯುವಕರು ಎಲ್ಲಾ ಕ್ಷೇತ್ರಗಳಲ್ಲಿ ಅಪ್ಯಾಯಮಾನವಾಗಿ ಕಂಡರೂ, ಸ್ವದೇಶದಲ್ಲಿ ಪರಕೀಯತೆ ಗುಣಗಳನ್ನು ಬೆಳೆಸುವ ಶಿಕ್ಷಣ ವ್ಯವಸ್ಥೆ ಅಗತ್ಯವಾಗಿ ಬದಲಾಗಬೇಕಿದೆ.

ಸಂವೇದನಾರಹಿತ, ಭಾವನಾರಹಿತ, ನಾನು, ನನ್ನ ಕುಟುಂಬ, ನನ್ನ ಮನೆ, ನನ್ನೂರು, ನನ್ನ ರಾಜ್ಯ, ನನ್ನ ರಾಷ್ಟ್ರ ಎಂಬ ಪರಿಕಲ್ಪನೆಯೇ ಮೂಡದ ಶಿಕ್ಷಣ ವ್ಯವಸ್ಥೆ ಇನ್ನೂ ಉಳಿದಿರುವುದು ಅಸಮರ್ಥನೀಯವೇ ಸರಿ.

ಗಾಂಧೀಜಿ, ಅರವಿಂದ, ಸ್ವಾಮಿವಿವೇಕಾನಂದರು ಮೂಲ ಶಿಕ್ಷಣ, ಆಧ್ಯಾತ್ಮಿಕ ಶಿಕ್ಷಣ, ವ್ಯಕ್ತಿ ನಿರ್ಮಾಣ ಶಿಕ್ಷಣ, ಶೀಲ ಶಿಕ್ಷಣಗಳ ಬಗ್ಗೆ ತಿಳಿಸಿರುವುದು ವೇದಗಳಿಂದ ಪ್ರಣೀತವಾದ ವಿಷಯಗಳೇ ಆಗಿವೆ. ನಮ್ಮ ವೇದಗಳು ವ್ಯಕ್ತಿ, ಕುಟುಂಬ, ಸಮಾಜ, ರಾಷ್ಟ್ರ ಕಲ್ಪನೆಯಲ್ಲಿ ಸಹಕಾರ, ಶ್ರದ್ಧೆ, ಉಲ್ಲಾಸ, ಜೀವನೋತ್ಸಾಹಗಳನ್ನು ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗಳ ಮೂಲಕ ಉತ್ತಮವಾಗಿ ರೂಪಿಸುವಲ್ಲಿ ಹಲವಾರು ಮಾರ್ಗದರ್ಶಿ ಸೂತ್ರಗಳನ್ನು ನೀಡಿದ್ದು ಅವು ಆಚರಣೆಗೆ ತರಲು ಸರಳವೂ, ಸುಲಭವೂ ಆದಂತಹ, ಉತ್ತಮ ಚಟುವಟಿಕೆಗಳಿಂದ ಕೂಡಿದ ಪ್ರತಿಯೊಬ್ಬರೂ ಅನುಸರಿಸಲು ಯೋಗ್ಯವಾದವು ಗಳಾಗಿವೆ.

ಕಠೋಪನಿಷತ್ ಹಾಗೂ ತೈತ್ತರಿಯೋಪನಿಷತ್‌ಗಳು ಭಾರತೀಯ ಪರಂಪರೆಯ ಪ್ರಾಚೀನ ಶಿಕ್ಷಣವು ವ್ಯಕ್ತಿಯ ವೈಯಕ್ತಿಕ ಬುದ್ಧಿಮತ್ತೆ, ಸಾಮೂಹಿಕ ಜೀವನ ಸಹಕಾರ, ಪರಸ್ಪರರ ರಕ್ಷಣೆ ನೀಡುವುದು, ಜೀವನ ಕೌಶಲಗಳು ಇವುಗಳನ್ನು ಯಾವ ಮಾರ್ಗದಲ್ಲಿ ಬಳಸಿಕೊಂಡರೆ ಜೀವನ ಅತ್ಯುತ್ತಮವಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ.

ಭಾರತೀಯ ಶಿಕ್ಷಣವನ್ನು ಪಂಚಕೋಶಗಳಲ್ಲಿ ತಿಳಿಸಿರುವಂತೆ, ಅವುಗಳಿಗೆ ಚಟುವಟಿಕೆಗಳನ್ನು ರೂಪಿಸಿ ಆಚರಣೆಗೆ ತಂದರೆ ಅತ್ಯುತ್ತಮ ಚಟುವಟಿಕೆಗಳನ್ನು ರೂಪಿಸಿ ಆಚರಣೆಗೆ ತಂದರೆ ಅತ್ಯುತ್ತಮ ಶಿಕ್ಷಣ ವ್ಯವಸ್ಥೆಯಾಗಿ ವಿಶ್ವದಲ್ಲೆ ಮಾದರಿ ಶಿಕ್ಷಣವಾಗಿ ರೂಪುಗೊಂಡು ಎಲ್ಲರಿಂದ ಆಕರ್ಷಣೆ ಹಾಗೂ ಪ್ರಶಂಸೆ ಗೊಳಗಾಗುವುದರಲ್ಲಿ ಸಂಶಯವಿಲ್ಲ.

•

ಶಿಕ್ಷಣ ಸೌರಭ

# ಶಿಕ್ಷಣ ಆಯೋಗಗಳು

ವಿ. ರಾಜ
ಶಿಕ್ಷಣ ಪ್ರಕೋಷ್ಠ ಪ್ರಮುಖ್
ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ



ಭಾರತೀಯ ಶಿಕ್ಷಣದ ಮೇಲೆ ಮಹತ್ವದ ಪರಿಣಾಮ ಬೀರಿದ ಕೆಲವು ನೀತಿ ನಿರ್ಣಯಗಳ ಬಗ್ಗೆ ಸಂಕ್ಷಿಪ್ತವಾಗಿ ನೋಡೋಣ. 1948–49 ರಲ್ಲಿ ರಾಧಾಕೃಷ್ಣನ್ ಆಯೋಗ ಉನ್ನತ ಶಿಕ್ಷಣದ ವಿಸ್ತರಣೆ ಮತ್ತು ಸುಧಾರಣೆಗೆ ಒತ್ತು ನೀಡಿ, ಉನ್ನತ ವ್ಯಾಸಂಗ ಕುರಿತ ತನ್ನ ವರದಿಯನ್ನು ಸಲ್ಲಿಸಿತು. ಸಂವಿಧಾನದಲ್ಲಿ ಹೇಳಿದ ಉತ್ತಮ ಸಮಾಜದ ಆದರ್ಶಗಳು, ಮತ್ತು ಆಡಳಿತದ ಪ್ರಾಯೋಗಿಕ ಅಗತ್ಯ ಹಾಗೂ ಆರ್ಥಿಕ ಬೆಳವಣಿಗೆ ದಿಶೆಯಲ್ಲಿ ಕೆಲಸ ಮಾಡಲು, ಇದು ಹೊಸದಾಗಿ ಸ್ವಾತಂತ್ರ್ಯ ಪಡೆದ ರಾಷ್ಟ್ರಕ್ಕೆ ಬಹಳ ಮುಖ್ಯವಾಗಿತ್ತು. ಇದಾದ ನಂತರ, 1952 ರಲ್ಲಿ, ಇದೇ ರೀತಿಯ ಕ್ರಿಯೆಯನ್ನು ಮಾಧ್ಯಮಿಕ ಶಿಕ್ಷಣವನ್ನು ಕುರಿತು ಮುದಲಿಯಾರ್ ಆಯೋಗ ನೆರವೇರಿಸಿತು. ಎರಡೂ ಆಯೋಗಗಳ ವರದಿಗಳ ಆಧಾರದ ಮೇಲೆ ಕ್ರಮ ತೆಗೆದು ಕೊಳ್ಳಲಾಗಿದೆ ಆದರೆ, ಯಾವುದೇ ಔಪಚಾರಿಕ ಸಮಗ್ರ ನೀತಿಯನ್ನು ಸೂತ್ರೀಕರಿಸಲಿಲ್ಲ.

ಭಾರತದಲ್ಲಿ ನಿರ್ಣಾಯಕ ಶಿಕ್ಷಣ ನೀತಿಯನ್ನು ರೂಪಿಸಿದ್ದು 1964–66 ರ ಕೊಠಾರಿ ಆಯೋಗದ ಮೂಲಕ, ತತ್ಪರಿಣಾಮವಾಗಿ 1968 ರ ಶಿಕ್ಷಣ ನೀತಿ ಜಾರಿಯಾಯಿತು. ಆಯೋಗಕ್ಕೆ ವಹಿಸಿದ್ದ ಅಧಿಕೃತ ಕಾರ್ಯವೆಂದರೆ ಯಾವ ರೀತಿಯ ರಾಷ್ಟ್ರೀಯ ಶಿಕ್ಷಣ ಮಾದರಿಯನ್ನು ಜಾರಿಗೆ ತರಬೇಕು ಎಂಬುದರ ಬಗ್ಗೆ ಮತ್ತು ಎಲ್ಲಾ ಹಂತಗಳಲ್ಲಿ ಮತ್ತು ಎಲ್ಲ ಅಂಶಗಳನ್ನು ಒಳಗೊಂಡು ಶಿಕ್ಷಣದ ಅಭಿವೃದ್ಧಿಗೆ ಅನುಸರಿಸತಕ್ಕ ಸಾಮಾನ್ಯ ತತ್ವಗಳು ಮತ್ತು ನೀತಿಗಳ ಬಗ್ಗೆ ಸರ್ಕಾರಕ್ಕೆ ಸಲಹೆ ಸಲಹೆ ನೀಡುವುದು. ಆಯೋಗವು ತನ್ನ ವರದಿಯನ್ನು ಸಲ್ಲಿಸುವ ಮೊದಲು ಎರಡು ವರ್ಷಗಳ ಕಾಲ ಆಳವಾದ ಮತ್ತು ವ್ಯಾಪಕವಾದ ತನಿಖೆಯನ್ನು, ಸಮಾಲೋಚನೆಗಳನ್ನು ಮತ್ತು ಚರ್ಚೆ ಸಂವಾದಗಳ ಗಮನಾರ್ಹ ಪ್ರಕ್ರಿಯೆಯನ್ನು ಜರುಗಿಸಿತು. ಸರ್ಕಾರವೂ, ಈ ವರದಿಯ ಆಧಾರದ ಮೇಲೆ, 1968 ರ ಶಿಕ್ಷಣ ನೀತಿಯನ್ನು (ಇಪಿ 68) ಜಾರಿಗೆ ತರುವ ಮೊದಲು ಆಳವಾದ ವಿವೇಚನೆ ಮತ್ತು ವ್ಯಾಪಕ ಸಮಾಲೋಚನೆಯ ಇಂಥದೇ ಪ್ರಕ್ರಿಯೆಯನ್ನು ಜರುಗಿಸಿತು. ಜೆ.ಪಿ. ನಾಯಕ್, ಭಾರತೀಯ ಶಿಕ್ಷಣ ಇತಿಹಾಸದಲ್ಲಿ ಪ್ರಮುಖ ವ್ಯಕ್ತಿ, ಆಯೋಗದ ಸದಸ್ಯ ಕಾರ್ಯದರ್ಶಿ. ಅವರ ಕೊನೆಯ ಪುಸ್ತಕ ಪುಸ್ತಕವಾಯಿತು 'ಶಿಕ್ಷಣ ಆಯೋಗ' ಮತ್ತು ತರುವಾಯ 'ಭಾರತೀಯ ಶಿಕ್ಷಣ ರಂಗ'ದ ಈ ನಿರ್ಣಾಯಕ ಘಟ್ಟದ ಒಂದು ಆಕರ್ಷಕ ನಿರೂಪಣೆಯಾಗಿದೆ. ಈ ಪುಸ್ತಕಕ್ಕೆ ಮುನ್ನುಡಿ ಬರೆದ ಮಾಲ್ಕಮ್ ಆದಿಶೇಷಯ್ಯ ಇದನ್ನು ನಾಯಕ್ ಅವರ ತಪ್ಪೊಪ್ಪಿಗೆ ಎಂದು ಕರೆದಿದ್ದಾರೆ.

ಶಿಕ್ಷಣದ ಸವಾಲುಗಳು ಎಂಬ ದಾಖಲೆಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಭಾರತೀಯ ಶಿಕ್ಷಣದ ಸ್ಥಿತಿಗತಿಯ ದಿಟ್ಟ ಮೌಲ್ಯಮಾಪನ ಪಡೆಯಲು 1985 ರಲ್ಲಿ ರಾಷ್ಟ್ರವ್ಯಾಪಿ ಚರ್ಚೆಗಳನ್ನು ಪ್ರಾರಂಭಿಸಿತು. ಈ ಚರ್ಚೆಗಳು ಹೊಸ ಶಿಕ್ಷಣ ನೀತಿ 1986 (NEP 86)ಯ ಆಧಾರವಾಯಿತು. ಇದು ತಾತ್ವಿಕ ವಾಗಿ ಮತ್ತು ನಿರ್ದೇಶನಾತ್ಮಕವಾಗಿ ಇಪಿ 68 ಅಡಿಪಾಯದ ಮೇಲೆ ಬೆಳೆದದ್ದಾಗಿತ್ತು. ಎರಡು ಸತತ ಸರ್ಕಾರಗಳು ನೇಮಕ ಮಾಡಿದ ಎರಡು ಸಮಿತಿಗಳ ವಿಮರ್ಶೆಯ ನಂತರ, NEP 86 ಕಡೆಗೂ 1992 ರಲ್ಲಿ ನೀತಿಯ ರೂಪದಲ್ಲಿ ಜಾರಿಗೆ ಬಂತು. ಇದು ಈಗ ಭಾರತೀಯ ಶಿಕ್ಷಣ ಕಾರ್ಯ ನಿರ್ವಹಿಸುತ್ತಿರುವ ಮೂಲ ನೀತಿ ಚೌಕಟ್ಟಾಗಿ ಮುಂದುವರಿದಿದೆ.

ಭಾರತದಲ್ಲಿ ಶಿಕ್ಷಣದ ಸಂಕೀರ್ಣ ಆಡಳಿತ ಪರಿಸರದಲ್ಲಿ, ಇದೇನೂ ನೀತಿ ರಚನೆಯ ಪ್ರಯತ್ನಗಳ ಒಂದು ಸಮಗ್ರವಾದ ಪಟ್ಟಿಯಲ್ಲ. ನಿರ್ದಿಷ್ಟ ಕಾರ್ಯನೀತಿಯ ಬದಲಾವಣೆಗಳ ಮೂಲಕ ಮತ್ತು ರಾಜ್ಯಗಳಲ್ಲಿ ಮತ್ತು ಕೇಂದ್ರ ಸರ್ಕಾರದಲ್ಲಿ ಸಕ್ರಿಯತೆ (ಅಥವಾ ನಿಷ್ಕ್ರಿಯತೆ) ಮೂಲಕ ಘಟನೆಗಳು ನಿರಂತರ ವಾಗಿ ಸಂಭವಿಸುತ್ತಲಿವೆ. ಶಿಕ್ಷಣದ ಒಟ್ಟಾರೆ ಕ್ರಿಯಾತ್ಮಕತೆಯಲ್ಲಿ ನೀತಿ ಎಂಬುದು ಕೇವಲ ಒಂದು ಆಯಾಮ ಎಂದು ಬೇರೆಯಾಗಿ ಹೇಳಬೇಕಾಗಿಲ್ಲ. ಇನ್ನೂ ಅನೇಕ ಆಯಾಮಗಳಿವೆ. ಉದಾಹರಣೆಗಾಗಿ ನಾಗರಿಕ ಸಮಾಜದ ಪ್ರಯತ್ನ, ಸಂಶೋಧನೆ, ಸಾಮಾಜಿಕ ಬದಲಾವಣೆಗಳು. ಆದಾಗ್ಯೂ, ಜಾರಿಗೆ ಬಂದ ಕೆಲವು ಪ್ರಮುಖ ನೀತಿಗಳು ಮೂಲ ಚೌಕಟ್ಟುಗಳು, ನಿರ್ದೇಶನ ಗಳು ಹಾಗು ಆಧಾರ ತತ್ವಗಳನ್ನು ನಿಗದಿ ಪಡಿಸಿ ದೀರ್ಘಕಾಲೀನ ಮತ್ತು ಆಳವಾದ ಪರಿಣಾಮವನ್ನು ಉಂಟುಮಾಡಿವೆ.

ನಾವು ಇನ್ನೊಂದು ಇದೇ ತರಹದ ನೀತಿ ರಚನೆಯ ತುದಿ ಘಟ್ಟದಲ್ಲಿದ್ದೇವೆ. ಈಗಿನ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ರಚಿಸಲಿದ್ದೇವೆ ಎಂದು ಘೋಷಿಸಿದೆ. ಈ ಅವಧಿ ಯಲ್ಲಿ ಗಳಿಸಿದ ಶೈಕ್ಷಣಿಕ ತಿಳುವಳಿಕೆಯನ್ನು ತನ್ನಲ್ಲಿ ಸಂಯೋಜಿಸಿ ಕೊಳ್ಳಬೇಕಾಗುತ್ತದೆ. ಇದನ್ನು ಮಾಡುವಾಗ,ಅದು ನಮ್ಮ ಶಿಕ್ಷಣ ತತ್ತ್ವಚಿಂತನೆಯ ನೆಲೆಗಟ್ಟನ್ನು ಮತ್ತೆ ಗುರುತಿಸಿ ವಿಷದಪಡಿಸ ಬೇಕಾಗುತ್ತದೆ ಹಾಗೆಯೇ ಮುಂದಿನ ಕೆಲವು ದಶಕಗಳಲ್ಲಿ ಸಾಗ ಬೇಕಾದ ದಿಕ್ಕನ್ನು ನಿಗದಿಪಡಿಸಬೇಕಾಗುತ್ತದೆ. ದೃಷ್ಟಿ ಹೊಂದಿರು ತ್ತದೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ, ಆದರೇನು ಈ ಸರ್ಕಾರಕ್ಕೆ. ಕನಿಷ್ಠ ನಾಲ್ಕು ವರ್ಷಗಳ ಸಮಯವಿದೆ. ಇಂತಹ ನೀತಿ ನಿರ್ಧಾರದ ಪ್ರಕ್ರಿಯೆಯನ್ನು ಕುರಿತು ಚಿಂತನ ಮಂಥನ ಗಳನ್ನು ನಡೆಸಲಾಗುತ್ತಿದೆ. 1968 ಮತ್ತು 1986 ರ ಸಾಂಸ್ಥಿಕ ಮತ್ತು ರಾಜಕೀಯ ನೆನಪುಗಳು ತುಂಬಾ ಜೀವಂತವಾಗಿರುವ ಕಾರಣ, ನಾವು ಅಷ್ಟೇ ಸದೃಢವಾದ ಅಥವಾ ಸುಧಾರಿತ ಪ್ರಕ್ರಿಯೆ ಹೊರಬರಲಿದೆ ಎಂದು ಆಶಿಸೋಣ. ಮುಂದಿನ ಸಂಚಿಕೆಗಳಲ್ಲಿ ಪ್ರತಿಯೊಂದು ಶಿಕ್ಷಣ ಆಯೋಗದ ಬಗ್ಗೆ ವಿವರವಾಗಿ ಚರ್ಚಿಸೋಣ. ●

ಮಹಿಳಾ ಪುಟ

# ಕುಟುಂಬದ ಕೇಂದ್ರ ಬಿಂದು ಸ್ತ್ರೀ

■ ಶ್ರೀಮತಿ ಲತೇಶ್ವರಿ
ಸಹಾಯಕ ಪ್ರಾಧ್ಯಾಪಕರು(ಕನ್ನಡ ವಿಭಾಗ)
ಗೋಪಾಲಸ್ವಾಮಿ ಕಾಲೇಜ್ ಆಫ್
ಪ್ರೊಫೇಷನಲ್ ಸ್ಟಡೀಸ್, ಮೈಸೂರು

ಪುರಾತನ ಕಾಲದಿಂದಲೂ ಹೆಣ್ಣು ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ... ಪುರುಷ ಪ್ರಧಾನ ಸಮಾಜದಲ್ಲಿ ನಾರಿಗೆ ಸರಿಸಮಾನವಾದ ಸ್ಥಾನ ಸಿಗುವುದಾದರೂ ಹೇಗೆ ಸಾಧ್ಯ... ಗಂಡಿನ ದಬ್ಬಾಳಿಕೆಯಲ್ಲಿ ಹೆಣ್ಣು ನಲುಗಿ ಹೋಗುತ್ತಿದ್ದಾಳೆ.... ಮುಂತಾದ ವಾಕ್ಯಗಳನ್ನು ಕೇಳಿಯೇ ನಾವೆಲ್ಲ ಬೆಳೆದು ಬಂದವರು. ಆದರೆ ನಿಜವಾಗಿಯೂ ನಮ್ಮಲ್ಲಿ ಗರಿಗೆದುರುವ ಪ್ರಶ್ನೆಗಳು ಉತ್ತರಗಳ ಹುಡುಕಾಟದಲ್ಲಿಯೇ ಅಂತ್ಯ ಕಾಣುತ್ತವೆಯೇ? ಇಲ್ಲ ಅವು ಪ್ರಶ್ನೆಗಳಾಗಿಯೇ ಉಳಿದುಬಿಡುತ್ತವೆ.

ಸಮಾಜದ ಮುಖ್ಯವಾಹಿನಿಗೆ ಬಂದು ಕುಟುಂಬದ ಸಹಕಾರದೊಂದಿಗೆ ಸಾಧನೆ ಮಾಡಿದ ಮಹಿಳೆಯನ್ನು ಕಂಡಾಗ, ಆಕೆ ತನ್ನ ಕುಟುಂಬವನ್ನೂ ಸಲಹುತ್ತಾ ತನ್ನ ಗುರಿಯನ್ನು ಸಾಧಿಸಿ, ಆಗಸದೆತ್ತರಕ್ಕೆ ಬೆಳೆದು ನಿಂತಾಗ, ಇಡೀ ಸಮಾಜ ಶಹಬಾಸ್‌ಗಿರಿ ಹೇಳುತ್ತದೆ. ಅಂತಹ ಮಹಿಳೆಯರು ನಿಜವಾಗಿಯೂ ಅದೃಷ್ಟವಂತರೇ ಸರಿ. ಅತಿ ವಿರಳವೂ ಕೂಡ. ಇಂತಹ ಸ್ತ್ರೀಯೇ ಕುಟುಂಬದ ಕೇಂದ್ರಬಿಂದು. ಇದರಲ್ಲಿ ಎರಡು ಮಾತಿಲ್ಲ. ಆಕೆಯನ್ನು ಕುಟುಂಬದ ಸದಸ್ಯರೆಲ್ಲರೂ ಗೌರವಿಸುತ್ತಾರೆ. ಆಕೆಯ ಮಾತಿಗೆ ಮನ್ನಣೆ ದೊರೆಯುತ್ತದೆ. ಒಟ್ಟಾರೆ ಸಮಾಜದಲ್ಲಿರುವವರೆಲ್ಲರೂ ಗೌರವಿಸುತ್ತಾರೆ. ಇಂತಹ ವರ್ಗ ಒಂದೆಡೆ ಇದ್ದರೆ ಬೆಳಕಿಗೇ ಬಾರದೆ ನಿಸ್ವಾರ್ಥ ಸೇವೆಯನ್ನು ತನ್ನ ಕುಟುಂಬದ ಒಳಿತಿಗಾಗಿ ಮೀಸಲಿಡುತ್ತಾ, ಕುಟುಂಬದ ಪ್ರತಿಯೊಬ್ಬ ಸದಸ್ಯರ ಏಳಿಗೆಯಲ್ಲಿ ತನ್ನ ಹಿರಿಮೆಯನ್ನು ಕಾಣುತ್ತಾ ತನ್ನ ಜೀವನವನ್ನೇ ಗಂಧದ ಕೊರಡಿನ ಹಾಗೆ ಸವೆಸುತ್ತಿರುವ ಸ್ತ್ರೀಯರ ಉದಾತ್ತ ಗುಣಕ್ಕೆ ಬೆಲೆಕಟ್ಟಲಾದೀತೇ?

ಒಮ್ಮೆ ನನ್ನ ತರಗತಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪರಸ್ಪರ ಸಂವಾದದ ಸಂದರ್ಭದಲ್ಲಿ ಪರಿಚಯದ ಪ್ರಕ್ರಿಯೆ ನಡೆದಿತ್ತು. ಎಲ್ಲರೂ ತಮ್ಮ ತಂದೆ-ತಾಯಿಯ ಬಗ್ಗೆ ಹೇಳುವಾಗ, ತಂದೆ, ಬ್ಯಾಂಕ್, ಕಾರ್ಖಾನೆ ಸ್ವಂತ ಉದ್ಯೋಗ... ಹೀಗೆ ಪರಿಚಯಿಸಿಕೊಂಡ ಬಹುತೇಕ ವಿದ್ಯಾರ್ಥಿಗಳು ತಾಯಿಯ ಬಗ್ಗೆ ಹೇಳುವಾಗ "ಏನೂ ಉದ್ಯೋಗ ಮಾಡ್ತಾಯಿಲ್ಲ. ಸುಮ್ಮನೇ ಮನೆಯಲ್ಲಿದಾರೆ" ಎಂದು ಹೇಳುವಾಗ ನನಗೆ ಕಸಿವಿಸಿಯ ಜೊತೆಗೆ ಯಾಕೋ ಬೇಸರ. ಎಲ್ಲರ ಏಳಿಗೆಗಾಗಿ ದುಡಿಯುತ್ತಿರುವ ಆ ಜೀವಕ್ಕೆ ಕೃತಜ್ಞತೆ ಸಲ್ಲಿಸುವವರು ಯಾರು? ಯಾವ ನಿರ್ದಿಷ್ಟ ಪದವಿಯ ಹೆಸರು ಇಲ್ಲದೆ ದುಡಿಯುವ ಈ ಜೀವವನ್ನು ನೋಡಿಯೇ "ನಿನಗೆ ಬೇರೆ ಹೆಸರು ಬೇಕೆ ಸ್ತ್ರೀಯೆಂದರೆ ಅಷ್ಟೇ ಸಾಕೆ?" ಎಂಬ ಕವಿವಾಣಿ ಉದಯಿಸಿತೇನೋ. ನಮ್ಮ ಸುತ್ತ ಮುತ್ತ ಇಂತಹ ಅಸಂಖ್ಯಾತ ಮಹಿಳೆಯರನ್ನು ನಾವು ಕಾಣುತ್ತೇವೆ. ನಮಗೆ ಇದು ಸಾಮಾನ್ಯ ಸಂಗತಿ. ಸಮಾಜದ ಅತ್ಯಂತ ಚಿಕ್ಕ ಘಟಕವಾದಂತಹ ಕುಟುಂಬದಲ್ಲಿ ಸ್ತ್ರೀಯ ಪಾತ್ರವನ್ನು ಅತ್ಯಂತ ಸೂಕ್ಷ್ಮವಾಗಿ ತೆರೆದ ಮನಸ್ಸಿನಿಂದ ಗಮನಿಸುವುದಿದ್ದರೆ ಎಲ್ಲರ ಅಗತ್ಯಗಳನ್ನು ಬೇಸರವೇ ಇಲ್ಲದೆ ಪೂರೈಸುವ, ಮನೆಯ ಒಳಗೂ-ಹೊರಗೂ ಕುಟುಂಬದ ಬಂಡಿಯನ್ನು ಎಳೆಯುವುದರಲ್ಲಿ ಸಮರ್ಥ ವ್ಯಕ್ತಿಯಾದ, ಎಂದೂ ಹೊಗಳಿಕೆಯನ್ನು ನಿರೀಕ್ಷಿಸದ ಸಹೃದಯಿ. ಕುಟುಂಬದ ಪ್ರತಿಯೊಬ್ಬರ ಅಂದರೆ ಗಂಡ, ಮಕ್ಕಳ, ಅಷ್ಟೇ ಅಲ್ಲದೆ ಅವಿಭಕ್ತ ಕುಟುಂಬವಾದರೆ ಅತ್ತೆ-ಮಾವ, ಅತ್ತಿಗೆ-ನಾದಿನಿ, ಭಾವ-ಮೈದುನ ಹೀಗೆ ಎಲ್ಲರಿಗೂ ಹೊಂದಿಕೊಂಡು ತನ್ನ ಕುಟುಂಬವನ್ನು ಮಾದರಿಯಾಗಿಸುವ ಹೊಣೆ ಹೊತ್ತ ದಿಟ್ಟೆ. ಕೆಲವು ಸಂದರ್ಭಗಳಲ್ಲಿ ತನ್ನ ಕುಟುಂಬವೆಂಬ ರೈಲು ಎಲ್ಲಿಯೋ ಹಳಿ ತಪ್ಪುತ್ತಿದೆ ಎನ್ನುವ ಬಗ್ಗೆ ಸ್ವಲ್ಪ ಸೂಚನೆ ಕಂಡುಬಂದರೂ ಅದನ್ನು ಸರಿಪಡಿಸುವವರೆಗೆ ವಿಶ್ರಾಂತಿ ಬಯಸದ ಜೀವ. ನಾವು ಹಲವಾರು ಬಾರಿ ಕೇಳಿದ್ದೇವೆ. ತನ್ನ ಕರುಳ ಕುಡಿಗಳು ಎಲ್ಲೋ ದಾರಿ ತಪ್ಪುತ್ತಿದ್ದಾರೆ ಎಂದಾಗ ಮೊದಲು ತಿಳಿಯುವಂತದ್ದು ತಾಯಿಗೆ. ತನಗೆ ನೋವಾದರೂ ಅದನ್ನು ಬೇರೆಯವರಿಗೆ ತಿಳಿಸದೇ ನೋವನ್ನು ನುಂಗುತ್ತಾ, ತಪ್ಪು ಸರಿಪಡಿಸಲು ಹರಸಾಹಸ ಪಡುವಂತವಳು ಹೆಣ್ಣು. ಕುಟುಂಬದ ರಕ್ಷಣೆಗಾಗಿ ತನ್ನ ಪ್ರಾಣವನ್ನು ತ್ಯಾಗಮಾಡಿದಂತಹ ಹಲವಾರು ದಿಟ್ಟ ಗರತಿಯರನ್ನು ಪುರಾಣಗಳಲ್ಲಿ, ಜಾನಪದ ಕಥೆಗಳಲ್ಲಿ ಕೇಳಿದ್ದೇವೆ. ಅಂತಹ ಮನೋಭೂಮಿಕೆ ಇಂದಿನ ಬಹುತೇಕ ನಾರಿಯರಲ್ಲಿ ಇದೆ ಎಂಬುದು ಸತ್ಯ. ಹೆಣ್ಣಿಲ್ಲದ ಕುಟುಂಬದ ಸದಸ್ಯರೆಲ್ಲರೂ ಸರಿದಾರಿಯಲ್ಲಿ ಸಾಗಲಾರರು. ಯಾವುದೋ ಕುಟುಂಬ ಸೂತ್ರ ಹರಿದ ಗಾಳಿಪಟದಂತಾಗಿದೆ. ಸದಸ್ಯರೆಲ್ಲ ದಿಕ್ಕಾಪಾಲಾಗಿದ್ದಾರೆ, ಎಂದರೆ ಅಲ್ಲಿ ಸ್ತ್ರೀ ಪಾತ್ರದ ಅನುಪಸ್ಥಿತಿ ಖಂಡಿತ ಇರುತ್ತದೆ. ಈ ಮಾತನ್ನು ಒಪ್ಪಿಕೊಳ್ಳುವ ಹೃದಯವಂತಿಕೆ ಸಹೃದಯರಿಗೆ ಮಾತ್ರ ಸಾಧ್ಯ.

ಇದಿಷ್ಟೂ ಕೂಡ ಮದುವೆಯಾಗಿ ತವರು ಮನೆಯನ್ನು ಬಿಟ್ಟು ಗಂಡನ ಮನೆಯನ್ನು ಬೆಳಗಿದಂತಹ ನೀರೆಯರ ವ್ಯಕ್ತಿತ್ವವಾದರೆ, ಮದುವೆಯೇ ಇಲ್ಲದೆ ಹುಟ್ಟಿದ ಮನೆಯಲ್ಲಿಯೂ ಇದ್ದು ಹೆತ್ತವರನ್ನು, ಬೆನ್ನಿಗೆ ಬಿದ್ದವರನ್ನು ಸಲಹುತ್ತಾ ತನ್ನೆಲ್ಲ ಆಸೆ ಆಕಾಂಕ್ಷೆಗಳಿಗೆ ಎಳ್ಳು ನೀರು ಬಿಟ್ಟು, ಸಮಾಜದಲ್ಲಿ ನಗು ಮುಖದ ಮುಖವಾಡ ಧರಿಸಿ ಬದುಕು ಸವೆಸುತ್ತಿರುವ ದಿಟ್ಟೆ ಆಕೆ. ಸ್ತ್ರೀಯರ ಬಗ್ಗೆ ತಿಳಿದಾಗ ಅಚ್ಚರಿಯೊಟ್ಟಿಗೆ ಅನುಕಂಪ ಹುಟ್ಟುತ್ತದೆ. ಇಂತಹ ಹೆಣ್ಣುಮಕ್ಕಳನ್ನು ಕಂಡಾಗ ನಮಗೇಕೆ ಅವರ ಸಹವಾಸ ಎಂದು ಕೈಬಿಡುವ ಬದಲು, ಯಾವ ಮಾರ್ಗದಿಂದಲಾದರೂ ಸಹಾಯವನ್ನು ಮಾಡಲು ಸಾಧ್ಯವೇ

ಪುಟ 10 ಕ್ಕೆ ➤

# ಶಿಕ್ಷಕರಿಗೆ ಜೈಲು ಶಿಕ್ಷೆ ಖಂಡನೀಯ

ಹಿಂದೆಂದೂ ಕೇಳರಿಯದ ಒಂದು ಹೊಸ ಕಾನೂನನ್ನು ಪಾಸು ಮಾಡಿದ ಈ ಘನ ಸರ್ಕಾರದ ನಡೆಯನ್ನು ಏನೆಂದು ಬಣ್ಣಿಸಲಿ, ಸಮಾಜದ ಎಲ್ಲಾ ಸ್ಥರದ ಅಧಿಕಾರಿಗಳನ್ನು, ಅಭಿಯಂತರರನ್ನು, ದೊಡ್ಡ ದೊಡ್ಡ ವ್ಯವಹಾರಸ್ಥರನ್ನು, ವಿಚಾರವಾದಿಗಳನ್ನು, ವೈಜ್ಞಾನಿಕ ಚಿಂತಕರನ್ನು ಒಟ್ಟಿನಲ್ಲಿ ವ್ಯವಸ್ಥೆಯ ಒಟ್ಟಾರೆ ಭಾಗದ ಸೃಷ್ಟಿಕರ್ತನೇ ಶಿಕ್ಷಕ ಅಂದರೆ ಉತ್ಪ್ರೇಕ್ಷೆಯಾಗಲಾರದು.

ಅದನ್ನು ಸಾಧಕರು, ತಮ್ಮ ಸಾಧನೆಯ ಸಾರ್ಥಕತೆಯ ಸಂದರ್ಭದಲ್ಲೇ ಮುಕ್ತಕಂಠದಿಂದ ಉಲ್ಲೇಖಿಸಿದ್ದಾರೆ. ಇವೆಲ್ಲವುಗಳ ಮಧ್ಯೆ ಈಗ ಸರ್ಕಾರ ಪಾಸು ಮಾಡಿರುವ ಮಸೂದೆ 'ಮುಷ್ಕರ ನಿರತ ಶಿಕ್ಷಕರಿಗೆ ಜೈಲು ಶಿಕ್ಷೆ'. ಇದು ವ್ಯವಸ್ಥೆಯನ್ನು ಅಧೋಗತಿಗೆ ಕೊಂಡೊಯ್ಯುವ ಸರ್ಕಾರದ ಪ್ರಮಾಣಿಕ ಪ್ರಯತ್ನ ಎಂದರೆ ಖಂಡಿತಾ ತಪ್ಪಾಗಲಾರದು. ಹೋರಾಟದಿಂದಲೇ ಸ್ವಾತಂತ್ರ್ಯ ಪಡೆದ ರಾಷ್ಟ್ರ ನಮ್ಮದು. ಆದರೆ ತಮ್ಮ ಹಕ್ಕಿಗಾಗಿ, ಸಾಮಾಜಿಕ ನ್ಯಾಯಕ್ಕಾಗಿ, ಕೊಟ್ಟ ಆಶ್ವಾಸನೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಹೋರಾಟಕ್ಕೆ ಮುಂದಾಗಿರುವ ಸಮಾಜದ ನಿಷ್ಪಕ್ಷಪಾತ ಸ್ವಾರ್ಥರಹಿತ ಶಿಕ್ಷಕರ ವಿರುದ್ಧ ಪಾಸುಮಾಡಿರುವ ಈ ಮಸೂದೆ ನಿಜಕ್ಕೂ ಹಾಸ್ಯಾಸ್ಪದ ಹಾಗೂ ಖಂಡನೀಯ.

ಶಿಕ್ಷಕ ತನ್ನ ಸೇವಾವಧಿಯಲ್ಲಿ ಕೇಳುವ ತನ್ನ ನ್ಯಾಯಯುತ ಬೇಡಿಕೆ ಈಡೇರಿಕೆಗೆ ಹೋರಾಟ ಮಾಡುವುದು ಅಪರಾಧವೇ? ಲಾರಿ ಮಾಲೀಕರ ಮುಷ್ಕರಕ್ಕೆ ಬೆಲೆ ಇದೆ, ಬಾರ್ ಮಾಲೀಕರ ಮುಷ್ಕರಕ್ಕೆ ಬೆಲೆಯಿದೆ. ಆದರೆ ವ್ಯವಸ್ಥೆಯ ಸುಧಾರಕರೆಂದು ಬಣ್ಣಿಸಲಿರುವ ಶಿಕ್ಷಕನ ಹೋರಾಟಕ್ಕೆ ಜೈಲು ಶಿಕ್ಷೆ.

ಶಿಕ್ಷಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಯಾವ ವ್ಯವಸ್ಥೆಯೂ ಚಿರಕಾಲ ಬದುಕಲು ಸಾಧ್ಯವಿಲ್ಲ. ಸಂಬಳ ಹೆಚ್ಚಿಸದಿದ್ದರೆ ಯಾವ ಶಿಕ್ಷಕನೂ ಸಾಯುವುದಿಲ್ಲ. ಬದಲಾಗಿ ನ್ಯಾಯಯುತ ಬೇಡಿಕೆ ಈಡೇರಿಸದೆ ಸೋಗು ಹೇಳಿ ಹೋರಾಟ ಹತ್ತಿಕ್ಕುವ ವ್ಯವಸ್ಥೆಯನ್ನು ಕಿತ್ತೊಗೆಯಲು ಟೊಂಕ ಕಟ್ಟಿ ನಿಲ್ಲುವುದಂತೂ ಸತ್ಯ.

ಶಿಕ್ಷಕರ ನ್ಯಾಯಯುತ ಬೇಡಿಕೆ ಈಡೇರಿಸಲು ಇದು ಸರಿಯಾದ ಸಮಯ, ಶಿಕ್ಷಕರಿಂದ ಶಿಕ್ಷಕರಿಗಾಗಿ ಶಿಕ್ಷಕರಿಗೋಸ್ಕರ ಆಯ್ಕೆಯಾದ ಸದನದ ಶಿಕ್ಷಕ ಪ್ರತಿನಿಧಿಗಳೇ ದಯವಿಟ್ಟು ಇದರ ಆಳವನ್ನು ಅರಿತು ತೀಕ್ಷ್ಣ ಧ್ವನಿ ಎತ್ತಲೇ ಬೇಕು. ಶಿಕ್ಷಕರನ್ನು ಗೌರವಿಸಿ ಅವರ ಬೇಡಿಕೆ ಕೇವಲ ಆರ್ಥಿಕ ಲಾಭಕ್ಕಾಗಿ ನಡೆಸುವ ಹೋರಾಟ ಎಂದು ಪರಿಗಣಿಸದೇ ಅದು ಅವರ ಭಾವನಾತ್ಮಕ ಕೋರಿಕೆ ಎಂದು ಅದನ್ನು ಪುರಸ್ಕರಿಸಿ.

**– ರಂಗನಾಥ್ ಜಿ.ಕೆ.**
ಅಧ್ಯಕ್ಷರು, ಕ.ರಾ.ಮಾ.ಶಿ.ಸ,
ಚನ್ನಪಟ್ಟಣ, ರಾಮನಗರಜಿಲ್ಲೆ

# ಮಾಧ್ಯಮಿಕ ಶಿಕ್ಷಕ ಸಂಘ ನೇತೃತ್ವ: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ

ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲಾ ಆಡಳಿತ ಮಂಡಳಿ–ನೌಕರರ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಕರ್ನಾಟಕ ಖಾಸಗಿ ಆಡಳಿತ ಮಂಡಳಿಗಳ ಹಾಗೂ ನೌಕರರ ಒಕ್ಕೂಟದ ಕಾರ್ಯಾಧ್ಯಕ್ಷ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ನೇತೃತ್ವದಲ್ಲಿ ಧಾರವಾಡದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಯಿತು.

ಖಾಸಗಿ ಶಾಲಾ–ಕಾಲೇಜುಗಳಿಗೆ ಬಂದ್ ಕರೆ ನೀಡಿದ್ದರಿಂದ ಶಾಲಾ–ಕಾಲೇಜುಗಳಿಗೆ ಸಾಮೂಹಿಕ ರಜೆ ಹಾಕಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ನೌಕರರು ಹಾಗೂ ಆಡಳಿತ ಮಂಡಳಿ ಸದಸ್ಯರು, ಕಡಪಾ ಮೈದಾನದಿಂದ ಡಿಸಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು. ಬಳಿಕ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲಾ ನೌಕರರ ಬೇಡಿಕೆಗಳನ್ನು ಮುಖ್ಯಮಂತ್ರಿ ಪರಿಶೀಲಿಸಿದ್ದಾರೆ. ಒಕ್ಕೂಟದ ಪದಾಧಿಕಾರಿಗಳು ಹಾಗೂ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ಅವರು ಸರ್ಕಾರದ ಗಮನಕ್ಕೆ ತಂದರೂ ಸರ್ಕಾರದಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ. ಕಾಲ್ಪನಿಕ ವೇತನ ಬಡ್ತಿ ವಿಷಯ ಅನೇಕ ವರ್ಷಗಳಿಂದ ಇತ್ಯರ್ಥವಾಗದೇ ನನೆಗುದಿಗೆ ಬಿದ್ದಿದೆ. ಇದರಿಂದ ನೌಕರರು ನಿವೃತ್ತಿ ಹೊಂದಿದ ಮೇಲೆ ಆರ್ಥಿಕ ನಷ್ಟವಾಗುತ್ತಿದೆ. ಹೀಗಾಗಿ ಅನುದಾನ ರಹಿತ ಮತ್ತು ಅನುದಾನಿತ ಅವಧಿಯ ನಡುವಿನ ಕಾಲ್ಪನಿಕ ವೇತನ ಬಡ್ತಿ ವಿಷಯವಾಗಿ ಅರುಣ ಶಹಾಪೂರ ಹಾಗೂ ಉಳಿದ ವಿಧಾನ ಪರಿಷತ್ ಸದಸ್ಯರ ಕಮಿಟಿ ನೀಡಿದ ವರದಿಯನ್ನು ಯಥಾವತ್ತಾಗಿ ಕೂಡಲೇ ಜಾರಿಗೊಳಿಸಬೇಕು ಎಂದು ಆಗ್ರಹಿಸಲಾಯಿತು.

2012ರ ನಂತರ ಖಾಲಿಯಾಗಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಪರವಾನಗಿ ನೀಡದ ಕಾರಣ ಆಡಳಿತ ಮಂಡಳಿಯವರು ತಾತ್ಕಾಲಿಕವಾಗಿ ನೇಮಿಸಿಕೊಳ್ಳುತ್ತಿರುವುದರಿಂದ ಆರ್ಥಿಕ ಹೊರೆಯಾಗುತ್ತಿದೆ. ಹೀಗಾಗಿ ತಕ್ಷಣ ಪರವಾನಗಿ ನೀಡಬೇಕು. ಸಿಬಿಎಸ್‌ಸಿ ನಿಯಮಾವಳಿ ಪ್ರಕಾರ ಅನುದಾನಿತ ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಅನುಪಾತವನ್ನು ಕಡ್ಡಾಯವಾಗಿ 1:40ಗೆ ಕಡಿತಗೊಳಿಸಬೇಕು ಎಂದು ಒತ್ತಾಯಿಸಲಾಯಿತು. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ನಡುವಿನ ಮಲತಾಯಿ ಧೋರಣೆ, ಹೊಸ ಪಿಂಚಣಿ ಯೋಜನೆ ನೌಕರರ ನಡುವಿನ ತಾರತಮ್ಯ ನಿವಾರಣೆ ಮಾನ್ಯತೆ ನವೀಕರಣ, ವೇತನ ತಾರತಮ್ಯ ನಿವಾರಣೆ, ಸಮಗ್ರ ಶಿಕ್ಷಣ ಮಸೂದೆ, ಏಳನೇ ವೇತನ ಆಯೋಗ ಜಾರಿ ಸೇರಿದಂತೆ ಸುಮಾರು 25 ಬೇಡಿಕೆಗಳನ್ನು ಈಡೇರಿಸುವಂತೆ ಮನವಿಯಲ್ಲಿ ಆಗ್ರಹಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ ಸಂದೀಪ ಬೂದಿಹಾಳ, ಜಿಲ್ಲಾಧ್ಯಕ್ಷ ಶ್ರೀಧರ ಪಾಟೀಲ ಕುಲಕರ್ಣಿ, ಪ್ರಧಾನ ಕಾರ್ಯದರ್ಶಿ ಬಸವರಾಜ ದೇವರಮನಿ, ಸಂಘಟನಾ ಕಾರ್ಯದರ್ಶಿ ಶಿವಾನಂದ ನಾಗೂರ ಭಾಗವಹಿಸಿದ್ದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಎಲ್ಲ ಶಾಲಾ ಕಾಲೇಜುಗಳನ್ನು ಮಂಗಳವಾರ ಬಂದ್ ಮಾಡಲಾಗಿತ್ತು.

ದಾರಿದೀಪ

# ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ – ಭಾಗ 6

**ಭೀಮಸೇನ್ ಪುರೋಹಿತ್**
**ಸಹ ಪ್ರಾಧ್ಯಾಪಕರು,**
**ಎಂಜಿನಿಯರಿಂಗ್ ಕಾಲೇಜು,**
**ದಾವಣಗೆರೆ**



1773 ರಲ್ಲಿ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಆರಂಭವಾದ ನಂತರ, ಭಾರತೀಯರು ಆಂಗ್ಲ ಶಿಕ್ಷಣ ಪಡೆಯಲು ಉತ್ಸುಕತೆಯನ್ನು ತೋರಲಾರಂಭಿಸಿದರು. ಭಾರತ ಹಿತೈಷಿಯಾಗಿದ್ದ ಡೇವಿಡ್ ಹೇರ್ ಮತ್ತು ಬಂಗಾಳದ ವಿದ್ವಾಂಸ ರಾಧಾಕಾಂತ್ ದೇವ್ ಅವರು, ಆ ಹೊತ್ತಿಗೆ ಆಂಗ್ಲ ಶಿಕ್ಷಣವನ್ನು ಜಾರಿ ತರಲು ಮುಂದಡಿಯಿಟ್ಟಿದ್ದರು. ತದನಂತರ ಸುಪ್ರೀಂ ಕೋರ್ಟ್ ನ ನ್ಯಾಯಾಧೀಶರಾಗಿದ್ದ ಸರ್ ಎಡ್ವರ್ಡ್ ಹೈಡ್‌ರವರು, ಹಿರಿಯರ ಸಭೆಯನ್ನು ಕರೆದು, ಶಿಕ್ಷಣ ಸಂಸ್ಥೆಯನ್ನು ತೆರೆಯುವ ಪ್ರಸ್ತಾಪವನ್ನಿತ್ತರು. ಸಭೆಯ ಎಲ್ಲ ಸದಸ್ಯರೂ ಸರ್ವಾನುಮತದಿಂದ ಪ್ರಸ್ತಾಪವನ್ನಂಗೀಕರಿಸಿದರು. ಪ್ರಸಿದ್ಧ ಸಮಾಜ ಸುಧಾರಕರಾದ ರಾಜಾ ರಾಮ್ ಮೋಹನ್ ರಾಯ್ ಕೂಡ, ಈ ಸಂಸ್ಥೆಗೆ ಸಮ್ಮತಿ ಕೊಟ್ಟರು.




ಎಲ್ಲರ ಸಹಕಾರದಿಂದ 1817 ಜನವರಿ 20 ರಂದು, "ಪ್ರೆಸಿಡೆನ್ಸಿ ಕಾಲೇಜ್" ತನ್ನ ತರಗತಿಗಳನ್ನು 20 ವಿದ್ವಾಂಸರ ಜೊತೆಗೆ ಆರಂಭಿಸಿತು. ರಾಜಾರಾಮ್ ಮೋಹನ್‌ರಾಯರು ಕಾಲೇಜಿನ ಪ್ರಾಂಶುಪಾಲರಾದರೆ, ಬಾಬು ಬುದ್ಧಿನಾಥ್ ಮುಖರ್ಜಿ ಅವರು ಕಾಲೇಜಿನ ಮೊದಲ ಸೆಕ್ರೆಟರಿ ಆಗಿ ಆಯ್ಕೆಯಾದರು. ಆರಂಭದಲ್ಲಿ ಕೇವಲ ಪ್ರಗತಿಪರ ಹಿಂದೂ ಕುಟುಂಬದ ಮಕ್ಕಳು ಮಾತ್ರವೇ ಕಾಲೇಜು ಸೇರುತ್ತಿದ್ದರು. ಕಾಲಾನಂತರದಲ್ಲಿ ಮುಸ್ಲಿಂ, ಪಾರ್ಸಿ, ಯಹೂದಿಗಳೂ ವಿದ್ಯಾರ್ಥಿಗಳಾಗಿ ಬರಲಾರಂಭಿಸಿದರು.

ಆರಂಭದಲ್ಲಿ ಕಾಲೇಜಿನ ತರಗತಿಗಳು, ಗೋರಾಚಂದ್ ಬೈಸಾಕ್ ಅವರ ಒಂದು ಮನೆಯಲ್ಲಿ ನಡೆಯುತ್ತಿದ್ದವು. ಆ ಮನೆಯನ್ನು ಕಾಲೇಜಿನ ಮಂಡಳಿ ಬಾಡಿಗೆಗೆ ಪಡೆದಿತ್ತು. 1818ರ ನಂತರ, ತರಗತಿಗಳನ್ನು "ಫೆಂಗಿರಿ ಕಮಲಾ ಬೋಸ್ ಹೌಸ್" ಎಂಬ ಕಟ್ಟಡದಲ್ಲಿ ಆರಂಭಿಸಲಾಯಿತು.

ಸ್ವಾತಂತ್ರ್ಯಾನಂತರ 1972 ರಲ್ಲಿ, ಕಾಲೇಜಿನ ಉಪನ್ಯಾಸಕರೆಲ್ಲ ಕಾಲೇಜಿಗೆ ಸ್ವಾಯತ್ತ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಕೊಡಬೇಕೆಂದು ಸರ್ಕಾರಕ್ಕೆ ಬೇಡಿಕೆಯನ್ನು ಮುಂದಿಟ್ಟರು. ಅನೇಕ ಆರ್ಥಿಕ ತಜ್ಞರೂ, ಶಿಕ್ಷಣ ತಜ್ಞರೂ ಸೇರಿ ನಡೆಸಿದ ಮಾತುಕತೆಗಳ ನಂತರ, 2009 ರಲ್ಲಿ ಪಶ್ಚಿಮ ಬಂಗಾಳ ಸರ್ಕಾರ ಅದನ್ನು "ಪ್ರೆಸಿಡೆನ್ಸಿ ಯೂನಿವರ್ಸಿಟಿ" ಎಂದು ಘೋಷಿಸಿತು.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂತಲೂ ಪೂರ್ವದಲ್ಲಿ ಆರಂಭವಾದ ಈ ಕಾಲೇಜು ಕಾನೂನು, ಕಲೆ ಸೇರಿದಂತೆ ಅನೇಕ ವಿಭಾಗಗಳನ್ನು ಹೊಂದಿತ್ತು, ಬಂಗಾಳದ ಬಹುತೇಕ ಎಲ್ಲ ಮಹಾತ್ಮರೂ ಈ ಕಾಲೇಜಿನ ಉತ್ಪಾದನೆಗಳೇ. "ವಂದೇ ಮಾತರಂ" ಮಂತ್ರವನ್ನು ರಾಷ್ಟ್ರಕ್ಕೆ ಕೊಟ್ಟ ಋಷಿ ಬಂಕಿಮ ಚಂದ್ರರು, ದೇಶದ ಚಿಂತನಾ ಕ್ರಮವನ್ನೇ ಬದಲಿಸಿ ಯುವಕರನ್ನು ಉನ್ನತಿಯ ಉತ್ತುಂಗಕ್ಕೆ ಕರೆದೊಯ್ದ ವೀರಸನ್ಯಾಸಿ ಸ್ವಾಮೀ ವಿವೇಕಾನಂದರು, ದೇಶದ ಅದ್ಭುತ ಭೌತ ಶಾಸ್ತ್ರಜ್ಞ ಸತ್ಯೇಂದ್ರನಾಥ ಬೋಸ್, ಬ್ರಿಟಿಷರಿಗೆ ಕೊನೆಯವರೆಗೂ ಸಿಂಹಸ್ವಪ್ನದಂತೆ ಕಾಡಿಸಿ, ಅಂತಿಮ ಮರ್ಮಾಘಾತವನ್ನು ನೀಡಿದ ನೇತಾಜಿ ಸುಭಾಸಚಂದ್ರ ಬೋಸ್ – ಇವರೆಲ್ಲರೂ ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಗಳು.

ಭಾರತದ ಕ್ರಾಂತಿ, ವಿಜ್ಞಾನ, ಕಲೆ ಇವೆಲ್ಲವುದರ ಉತ್ಥಾನದಲ್ಲಿ ಪ್ರೆಸಿಡೆನ್ಸಿ ಕಾಲೇಜಿನ ಪಾತ್ರ ಮಹತ್ವದ್ದೆಂದು ವಿದಿತವಾಗುವ ಸಂಗತಿ. ●

**ಕಳಬೇಡ, ಕೊಲಬೇಡ ಹುಸಿಯ**
**ನುಡಿಯಲು ಬೇಡ,**
**ಮುನಿಯ ಬೇಡ,**
**ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ**
**ಇದಿರ ಹಳಿಯಲುಬೇಡ**
**ಇದೇ ಅಂತರಂಗ ಶುದ್ಧಿ !**
**ಇದೇ ಬಹಿರಂಗ ಶುದ್ಧಿ !**
**ಇದೇ ನಮ್ಮ ಕೂಡಸಂಗನನೊಲಿಸುವ ಪರಿ**

**ಲೋಕದ ಡೊಂಕ ನೀವೇಕೆ ತಿದ್ದುವಿರಿ?**
**ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ**
**ನಮ್ಮ ಕೂಡಲಸಂಗಮದೇವ !**

# ಶ್ರೀ ಮುಕುಂದ ಜೀಗೆ ನುಡಿ ನಮನ

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಜೀವನದಲ್ಲಿ ಕೆಲವರನ್ನು ಆಕಸ್ಮಿಕವಾಗಿ, ಒಮ್ಮೆ ಮಾತ್ರವೇ ಭೇಟಿಯಾದರೂ ಮನದಲ್ಲಿ ಆ ನೆನಪು ಸದಾ ಹಸಿರಾಗಿರುತ್ತದೆ, ಅವರು ಪ್ರಾತಃಸ್ಮರಣೀಯರಾಗಿರುತ್ತಾರೆ, ಸ್ಫೂರ್ತಿಯ ಸೆಲೆಯಾಗಿರುತ್ತಾರೆ. ಏಕೆಂದರೆ ಅವರು ಸುಸಂಸ್ಕೃತಿಯ, ಆದರ್ಶದ ಪ್ರತೀಕವಾಗಿರುತ್ತಾರೆ. ಅದರಿಂದಲೇ ಅಂತಹ ಘನ ವ್ಯಕ್ತಿತ್ವಕ್ಕೆ ನಮಿಸಿ, ಗೌರವಿಸಬೇಕೆನಿಸುತ್ತದೆ. ಅಂತಹ ಅಪರೂಪದ ಚೇತನ ಇತ್ತೀಚೆಗೆ ಬದುಕಿಗೆ ವಿದಾಯ ಹೇಳಿದ ಶ್ರೀ ಮುಕುಂದರಾವ್ ಕುಲಕರ್ಣಿಯವರು. ಎ.ಬಿ.ಆರ್.ಎಸ್.ಎಂ.ನ ಸಂಸ್ಥಾಪಕರಾಗಿ ದೇಶದಾದ್ಯಂತ ಸಾವಿರಾರು ಶಿಕ್ಷಕರಿಗೆ ಮಾರ್ಗದರ್ಶನ ನೀಡಿದವರು ಅವರು.

ಸುಮಾರು ಒಂದು ದಶಕದ ಹಿಂದೆ ನಾನು ಅವರನ್ನು ಸಂಪರ್ಕಿಸುವ ಸುಯೋಗವನ್ನು ಪಡೆದುಕೊಂಡಿದೆ. ನಮ್ಮ ಸಹೋದ್ಯೋಗಿ ರೇವತಿ ಮೇಡಂ ಮತ್ತು ಅವರ ಮಗ ಅರ್ಜುನ್ ಜೊತೆಯಲ್ಲಿ ಶಿರಡಿ ಯಾತ್ರೆಗೆ ಹೊರಟಿದ್ದೆ. ಪೂನಾದಲ್ಲಿ ಒಂದು ದಿನ ಇರಬೇಕೆಂಬ ಯೋಜನೆ ನಮ್ಮದಾಗಿತ್ತು. ಆ ಸಮಯದಲ್ಲಿ ನನ್ನ ಮತ್ತೊಬ್ಬ ಪರಿಚಿತರು (ಆಗ ಗೆಳತಿಯೆನ್ನುವ ಆತ್ಮೀಯತೆ ಬೆಳೆದಿರಲಿಲ್ಲ.) ನಮ್ಮದೇ ಕಾಲೇಜಿನ ಪ್ರೌಢಶಾಲಾ ವಿಭಾಗದ ಮುಖ್ಯಸ್ಥರಾಗಿದ್ದ ಸೀತಾಲಕ್ಷ್ಮಿ ಮೇಡಂ ಹೀಗೆ ಹೇಳಿದ್ದರು. "ಪೂನಾದಲ್ಲಿ ಶ್ರೀ ಮುಕುಂದರಾವ್ ಕುಲಕರ್ಣಿಜಿಯವರಿದ್ದಾರೆ, ಅವರ ಮನೆಯಲ್ಲಿ ನೀವು ಉಳಿಯಬಹುದು. ಅವರಿಗೆ ಫೋನ್ ಮಾಡಿ ನಿಮ್ಮ ಬಗ್ಗೆ ತಿಳಿಸುತ್ತೇನೆ. ನಿಮಗೆ ಅವರ ಫೋನ್ ನಂಬರ್ ವಿಳಾಸ ಕೊಡುತ್ತೇನೆ" ಎಂದು ಹೇಳಿ ಅದರಂತೆಯೇ ಎಲ್ಲ ವ್ಯವಸ್ಥೆ ಮಾಡಿಬಿಟ್ಟಿದ್ದರು. ನನಗಂತೂ ಶ್ರೀ ಮುಕುಂದರಾವ್ ಜೀಯವರ ಬಗ್ಗೆ ಒಂದಕ್ಷರವೂ ತಿಳಿದಿರಲಿಲ್ಲ. ಸಂಸ್ಥೆಯ ಬಗ್ಗೆಯಂತೂ ಕಿಂಚಿತ್ತೂ ಗೊತ್ತಿರಲಿಲ್ಲ. ಆದರೆ, ಪೂನಾ ತಲುಪಿ ರಾತ್ರಿ 9 ಗಂಟೆಗೆ ಅವರ ಮನೆಗೆ ಫೋನ್ ಮಾಡಿದಾಗ ಆತ್ಮೀಯವಾಗಿ ಮಾತನಾಡಿ, ಮನೆ ತಲುಪಲು ಸೂಕ್ತ ನಿರ್ದೇಶನ ನೀಡಿದ್ದಲ್ಲದೆ ಮನೆ ಸೇರಿದಾಗ ನಮ್ಮನ್ನು ಬಾಗಿಲಲ್ಲೇ ಎದುರುಗೊಂಡಿದ್ದರು. ಎಂಬತ್ತರ ಆ ಹೃದಯವಂತ ಶ್ರೀ ಮುಕುಂದರಾವ್ ಜೀ ತಮ್ಮ ಮನೆಯ ಎರಡನೇ ಮಹಡಿಯ ಕೋಣೆಯಲ್ಲಿ ನಮಗಾಗಿ ಹಾಸಿಗೆಗಳನ್ನು ಸಿದ್ಧಪಡಿಸಿದ್ದುದ್ದಲ್ಲದೆ ನಮ್ಮ ಜೊತೆ ಮತ್ತೆ ಮಹಡಿಯೇರಿ ಬಂದು ಎಲ್ಲವನ್ನೂ ತೋರಿಸಿ, ಬೆಳಗಿನ ಕಾರ್ಯಕ್ರಮಕ್ಕೆ ನಮಗೆ ವಾಹನದ ವ್ಯವಸ್ಥೆಯ ಮಾಹಿತಿ ನೀಡಿ ವಿಶ್ರಮಿಸುವಂತೆ ಹೇಳಿದ್ದರು. ಮಾರನೇ ದಿನ ನಾವು ನಮ್ಮ ಯೋಜನೆಯಂತೆ ದಿನವಿಡೀ ಪೂನಾ ಸುತ್ತಾಡಿ ಹಿಂತಿರುಗಿದಾಗ ರಾತ್ರಿಯಾಗಿತ್ತು. ಬೆಳಗ್ಗೆ ನಾವು ಒಗೆದು ಹಾಕಿದ್ದ ನಮ್ಮ ಉಡುಪುಗಳೆಲ್ಲವನ್ನೂ ಅಚ್ಚುಕಟ್ಟಾಗಿ ಮಡಿಸಿ, ಓರಣವಾಗಿಟ್ಟಿದ್ದರು ಆ ಹಿರಿಯರು. ಅವರ ಸರಳಸ್ವಭಾವದ, ಶ್ರೀಮಂತ ಸಂಸ್ಕೃತಿಯ ವ್ಯಕ್ತಿತ್ವದ ಪರಿಚಯವಾದಾಗ ನಮಗಂತೂ ಏನೂ ಹೇಳಲೂ ತೋಚಲಿಲ್ಲ. ಸಂಕೋಚದಿಂದ ಮೂಕರಾಗಿದ್ದೆವು. ದೊಡ್ಡದಾಗಿ ನಮಸ್ಕರಿಸುವುದರ ಹೊರತಾಗಿ ನಮಗಿನ್ನೇನೂ ಸಾಧ್ಯವಾಗಲಿಲ್ಲ. ಕೇವಲ ಒಂದು ದೂರವಾಣಿಯಲ್ಲಿ ನಮ್ಮ ಬಗ್ಗೆ ಕೇಳಿ ಅದೆಷ್ಟು ಚೆನ್ನಾಗಿ ನೋಡಿಕೊಂಡಿದ್ದರು? ತಂದೆಯ ಪ್ರೀತಿ, ವಾತ್ಸಲ್ಯವನ್ನೇ ಕಂಡಿದ್ದೆವು ನಾವು. ಭಾಷೆ ಬೇರೆ, ಊರು ಬೇರೆ, ಆದರೇನು? ಹೃದಯವಂತಿಕೆಯಿತ್ತಲ್ಲ? ಅವರ ಮನೆಯವರೆಲ್ಲರಿಗೂ (ಮಗ, ಸೊಸೆ, ಮೊಮ್ಮಕ್ಕಳು) ನಮ್ಮನ್ನು ಪರಿಚಯಿಸಿದ್ದರು. ಊಟವನ್ನೇ ನೀಡಿ ಉಪಚರಿಸಿದ್ದರು ಆ ಬಂಧುಗಳು. ಅಂದು ಹೊರಡುವ ಮೊದಲು ಎಲ್ಲರೂ ಕುಳಿತು ತೆಗೆಸಿಕೊಂಡ ಛಾಯಾಚಿತ್ರ ಇಂದಿಗೂ ಭದ್ರವಾಗಿ ನನಲ್ಲಿದೆ. ಆ ಎರಡು ದಿನಗಳು ನನ್ನ ನೆನಪಿನಲ್ಲಿ ಸದಾ ಹಸಿರಾಗಿ ಉಳಿದಿದೆ. 'ಎತ್ತಣ ಮಾಮರ, ಎತ್ತಣ ಕೋಗಿಲೆ'ಯೆಂಬಂತೆ ಕರ್ನಾಟಕದ ಮೂಲೆಯಿಂದ ಹೋಗಿ ಆ ಮಹಾನ್ ವ್ಯಕ್ತಿತ್ವದೊಂದಿಗೆ ಸ್ವಲ್ಪ ಕಾಲವೇ ಕಳೆಯುವಂತೆ ಮಾಡಿದ ಭಗವಂತನಿಗೆ ನಾನು ಚಿರಋಣಿ. ಆ ಸುಸಂಸ್ಕೃತ ಚೇತನಕ್ಕೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳು.

# ಚಂದ್ರಶೇಖರ ಪಾಟೀಲ ಮತ್ತು ಮಹೇಶ ದೇವಣಿ ವಿಜ್ಞಾನ ಪರಿಷತ್‌ಗೆ ಆಯ್ಕೆ



ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಸಮಿತಿಗೆ ನಡೆದ ಚುನಾವಣೆಯಲ್ಲಿ ಖಜಾಂಚಿಯಾಗಿ ಚಂದ್ರಶೇಖರ ಪಾಟೀಲ ಮತ್ತು ಮಹೇಶ ದೇವಣಿ ಸದಸ್ಯರಾಗಿ ಇವರೀರ್ವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಕಲಬುರಗಿ ವಿಭಾಗ ಪ್ರಮುಖ ಶ್ರೀ ಮಹೇಶ ಬಸರಕೋಡ ತಿಳಿಸಿದ್ದಾರೆ. ಚಂದ್ರಶೇಖರ ಪಾಟೀಲರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಲಬುರಗಿ ಜಿಲ್ಲಾ ಅಧ್ಯಕ್ಷರಾಗಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಅಭಿನಂದಿಸುತ್ತದೆ.

**ಪರರ ಚಿಂತೆ ನಮಗೇಕಯ್ಯಾ, ನಮ್ಮ ಚಿಂತೆ ನಮಗೆ ಸಾಲದೇ ? ಕೂಡಲಸಂಗಯ್ಯ**
**ಒಲಿದಾನೋ ಒಲಿಯನೋ ಎಂಬ ಚಿಂತೆ, ಹಾಸಲುಂಟು, ಹೊದೆಯಲುಂಟು.**

➢ ಪುಟ 3 ರಿಂದ..... ಯುಗಾದಿ...

"ಶಿಕ್ಷಣದಲ್ಲಿ ಭಾರತೀಯತೆ" ತರಬೇಕೆಂಬ ತೀವ್ರ ಹಂಬಲ ಶ್ರೀ ಮುಕುಂದರಾಯರದು. ಇದಕ್ಕೇ ಗಮನಕೊಡಲು ಪ್ರತ್ಯೇಕ ಸಂಘಟನೆ ಅವಶ್ಯಕವಿದೆ ಎಂದು ಚಿಂತಿಸಿ ಸಂಬಂಧಿತ ಕಾರ್ಯಕರ್ತರೊಡನೆ ಚರ್ಚಿಸಿ ಇದಕ್ಕಾಗಿ ಪ್ರತ್ಯೇಕವಾಗಿ "ಭಾರತೀಯ ಶಿಕ್ಷಣ ಮಂಡಲ"ವನ್ನೂ ಸ್ಥಾಪಿಸಲು ಇವರೇ ಕಾರಣಕರ್ತರಾದರು. ಇವರು ABRSM ಜೊತೆಗೆ ಭಾರತೀಯ ಶಿಕ್ಷಣ ಮಂಡಳ-ಎರಡರ ವಿಸ್ತಾರಕ್ಕೂ ಇಡೀ ದೇಶದ ಸಂಚಾರವನ್ನೂ ಒಂದೇ ಸಮನೆ ಮಾಡುತ್ತಿದ್ದರು.

ಸಾಮಾನ್ಯವಾಗಿ 75-80 ವಯಸ್ಸಿನ ನಂತರ ಹೊಸ ಪೀಳಿಗೆಗಳಿಗೆ ಜವಾಬ್ದಾರಿ ವಹಿಸುವ ಪದ್ಧತಿಯಂತೆ ಇವರು ಮುಂದೆ ABRSM ನ ಸಂರಕ್ಷರಾಗಿಯೂ ಪ್ರವಾಸ ಮಾರ್ಗದರ್ಶನ, ಸಭೆಗಳಲ್ಲಿ ಪ್ರೇರಣೆ ಇವೆಲ್ಲವನ್ನೂ ಮುಂದುವರೆಸಿದರು.

ಮಾನ್ಯ ಮುಕುಂದರಾಯರು ತಮ್ಮ 90ನೇ ವಯಸ್ಸಿನಲ್ಲಿ ನಮ್ಮನ್ನು ಅಗಲಿದರೂ ಅವರ ಮೂಲ ಪ್ರೇರಣೆ, ಮಾರ್ಗದರ್ಶನ ನಮ್ಮೆಲ್ಲರಿಗೂ ಸ್ಫೂರ್ತಿದಾಯಕ. ಮಾನ್ಯ ಮುಕುಂದರಾಯರಿಗೆ ಸದ್ಗತಿ ಪ್ರಾಪ್ತವಾಗಲೆಂದು ಪರಮಾತ್ಮನಲ್ಲಿ ನನ್ನ ಬೇಡಿಕೆ. ●

# ಭಾರತ ಅಧ್ಯಕ್ಷರ ಆಯ್ಕೆ, ಹೇಗೆ?

ಕಳೆದ ವರ್ಷ ಅಮೇರಿಕಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆ ವಿಶ್ವಾದ್ಯಂತ ಕುತೂಹಲವನ್ನು ಕೆರಳಿಸಿತ್ತು. ಈಗ ಜುಲೈ ತಿಂಗಳಲ್ಲಿ ನಡೆಯಬೇಕಾಗಿರುವ ಭಾರತೀಯ ಅಧ್ಯಕ್ಷೀಯ ಚುನಾವಣೆ ಯಾವ ವಿಧವಾದ ಕುತೂಹಲವನ್ನು ಕೆರಳಿಸುವುದಿಲ್ಲ ಏಕೆ? ಅನೇಕ ಭಾರತೀಯರಿಗೇ ಅಧ್ಯಕ್ಷ ಚುನಾವಣೆ ಬಗ್ಗೆ ಅರಿವಿಲ್ಲ. ಅಮೇರಿಕಾದಂತೆ ಭಾರತೀಯ ಅಧ್ಯಕ್ಷ ಚುನಾವಣೆಗೆ ಪ್ರಚಾರ, ಪ್ರಸಾರ ಇರುವುದಿಲ್ಲ ಅದರಿಂದ ಕುತೂಹಲವೂ ಇಲ್ಲ. ಆದರೂ ಜುಲೈ ತಿಂಗಳಲ್ಲಿ ನಡೆಯಬೇಕಾಗಿರುವ ಈ ಚುನಾವಣೆಗೆ ಮತದಾರರು ಯಾರು? ಅವರ ಮತದ ಬೆಲೆ ಎಷ್ಟು? ಎನ್ನುವುದು ಜನಸಾಮಾನ್ಯರಿಗೆ ಅರಿವಿಲ್ಲ.

ಈ ಚುನಾವಣೆಗೆ ಮತದಾರರು ಸಂಸದರು ಹಾಗೂ ವಿವಿಧ ರಾಜ್ಯಗಳ ವಿಧಾನಸಭಾ ಸದಸ್ಯರಾಗಿರುತ್ತಾರೆ. ಈ ಗುಂಪನ್ನು ಎಲೆಕ್ಟ್ರೊಲ್‌ಕಾಲೇಜ್(ಚುನಾಯಿಸುವ ಸಮುದಾಯ) ಎಂದು ಕರೆಯುತ್ತಾರೆ. ಭಾರತಾದ್ಯಂತ 4896 ವಿಧಾನ ಸಭಾ ಸದಸ್ಯರು ಹಾಗೂ 776 ಲೋಕಸಭಾ+ ರಾಜ್ಯಸಭಾ ಸದಸ್ಯರು ಮತದಾರರಾಗಿರುತ್ತಾರೆ.

## ಮತದ ಬೆಲೆ

ಓರ್ವ ಸಂಸತ್ತು ಸದಸ್ಯರ ಮತದ ಬೆಲೆ 708. ಆದರೆ ವಿಧಾನ ಸಭಾ ಸದಸ್ಯರ ಬೆಲೆ ಬೇರೆ ಬೇರೆ ಇರುತ್ತದೆ. ಅದು ಆಯಾ ರಾಜ್ಯಗಳ ಜನಸಂಖ್ಯೆಗೆ ಅನುಗುಣವಾಗಿರುತ್ತದೆ. ಅದರ ಲೆಕ್ಕಾಚಾರ ಹೀಗಿರುತ್ತದೆ.

ಆಯಾ ರಾಜ್ಯದ ಜನಸಂಖ್ಯೆಯನ್ನು ಒಟ್ಟು ವಿಧಾನಸಭಾ ಸದಸ್ಯರ ಸಂಖ್ಯೆಯಿಂದ ಭಾಗಿಸಿ ಬಂದ ಭಾಗಲಬ್ದವನ್ನು ಮತ್ತೊಮ್ಮೆ 1000 ದಿಂದ ಭಾಗಿಸಿದಾಗ ಬರುವ ಭಾಗಲಬ್ದವೇ ಆಯಾ ರಾಜ್ಯದ ಓರ್ವ ಪ್ರತಿನಿಧಿಯ ಮತದ ಬೆಲೆಯಾಗಿರುತ್ತದೆ. 1971ರ ಜನಗಣತಿಯಂತೆ ಉತ್ತರ ಪ್ರದೇಶದ ಓರ್ವ ಶಾಸಕರ ಮತದ ಬೆಲೆ 208, ಹಾಗೂ ಸಿಕ್ಕಿಂ ಶಾಸಕರ ಮತದ ಬೆಲೆ ಕೇವಲ 7 ಮಾತ್ರ.

– ಜಿ.ಎಸ್.ಕೆ.

➢ ಪುಟ 6 ರಿಂದ..... ಸ್ತ್ರೀ...

ಎಂದು ಯೋಚಿಸಿ ಹಾಗೆ ನಡೆಯುವಂತಹ ಪುಣ್ಯದ ಕೆಲಸ ಬೇರೊಂದಿದೆಯೇ? ಆ ಕುಟುಂಬವನ್ನು ಸಲಹಲು, ಜವಾಬ್ದಾರಿ ತೆಗೆದುಕೊಳ್ಳಲು ಗಂಡು ಮಗನಿಲ್ಲವೇ?ಎಂಬ ಪ್ರಶ್ನೆ ಮೂಡುವುದು ಸಹಜ. ಎಷ್ಟು ಜನ ಗಂಡು ಮಕ್ಕಳು ಆಸರೆಯಾಗಿರುತ್ತಾರೆ? ಇದ್ದರೂ ಬೆರಳೆಣಿಕೆಯಷ್ಟು ಮಾತ್ರವೆ. ಇಲ್ಲವೆಂದರೂ ತಪ್ಪಿಲ್ಲ. ಎಷ್ಟೋ ವೃದ್ಧ ದಂಪತಿಗಳು ಹೆಮ್ಮೆಯಿಂದ ತಮ್ಮ ಮಗಳನ್ನು ತೋರಿಸಿ ಈಕೆ ನನ್ನ ಮಗಳಲ್ಲ ಮಗ ಎಂದು ಹೇಳುತ್ತಾ ಕಣ್ಣಾಲಿಗಳನ್ನು ತುಂಬಿಕೊಂಡಾಗ ನಿಜಕ್ಕೂ ಅಂತಹ ಹೆಣ್ಣು ಮಕ್ಕಳಿಗೊಂದು ಸಲಾಮ್ ಹೇಳುತ್ತದೆ ಹೃದಯ.

ಇನ್ನೊಂದು ವರ್ಗ, ಸಮಾಜದ ಅವಕೃಪೆಗೆ ಒಳಗಾಗಿ ಕಠೋರವಾದ ಹೆಸರಿನಿಂದ ಕರೆಯಲ್ಪಡುವ ನತದೃಷ್ಟರದ್ದು. ತನ್ನ ಕುಟುಂಬವನ್ನು ಬಡತನ ಬೇಗೆಯಿಂದ ತಪ್ಪಿಸಲೋ, ನೌಕರಿ ಅರಸಿಯೋ, ತುತ್ತು ಕೂಳನ್ನು ಕುಟುಂಬದವರಿಗೆ ಒದಗಿಸಲೋ ತುಳಿಯಬಾರದ ಹಾದಿಯನ್ನು ತುಳಿದು ಪಾಪಕೂಪದಲ್ಲಿ ಬಿದ್ದು ನರಕಯಾತನೆಯನ್ನು ಅನುಭವಿಸುತ್ತಾ ಜೀವನ ಸವೆಸುತ್ತಿರುವ ಎಷ್ಟೋ ಹೆಣ್ಣು ಮಕ್ಕಳಿದ್ದಾರೆ. ಅವರಲ್ಲಿರುವ ಸಮಾಧಾನಕರ ವಿಷಯ ಒಂದೇ. ತನ್ನ ಕುಟುಂಬ ದೂರದಲ್ಲೆಲ್ಲೋ ಸುಖವಾಗಿದೆಯಲ್ಲ. ಕುಟುಂಬದ ಸದಸ್ಯರೆಲ್ಲ ಒಬ್ಬೊಬ್ಬರಾಗಿ ಒಂದು ನೆಲೆಯನ್ನು ಕಂಡುಕೊಳ್ಳುತ್ತಾರೆ. ಅಲ್ಲಿಯವರೆಗೆ ತಾನು ಬದುಕಲೇಬೇಕು. ಅವರನ್ನೆಲ್ಲ ಸಲಹಲೇ ಬೇಕು. ನಂತರ ಈ ಹಾಳು ಜನ್ಮ ಅಂತ್ಯವಾಗಲೀ... ಓ ನಾರಿ ಎಂತಹ ಅದ್ಭುತ ಶಕ್ತಿ ನಿನ್ನದು? ನೀನು ಜೀವ ನದಿಯೋ, ಹತ್ತಾರು ನದಿಗಳನ್ನು ತನ್ನೊಡಲಲ್ಲಿ ಸೇರಿಸಿಕೊಳ್ಳುವ ಸಾಗರವೋ? ಪರ್ವತದ ಹಾಗೆ ಎಂದೂ ವಿಚಲಿತಗೊಳ್ಳದೆ ನಿಂತ ನಿನಗೆ ಸಾಟಿಯಾರು? "ದೇವರು ಯಾವಾಗಲೂ ಎಲ್ಲಾ ಕಡೆಯೂ ಇರಲು ಸಾಧ್ಯವಿಲ್ಲ. ಆದ್ದರಿಂದ ತಾಯಂದಿರನ್ನು ಸೃಷ್ಟಿಸಿದ" ಎಂದು ನುಡಿದ ಕವಿಮನ ಅವಲೋಕಿಸಿದ ಆಳವೆಷ್ಟು?

ಹಾಗಾದರೆ ಸ್ತ್ರೀಯನ್ನು ಜೀವನವೆಂಬ ಕಡಲಿನಲ್ಲಿ ಸರಾಗವಾಗಿ ಸಾಗುತ್ತಿರುವ ದೋಣಿಯನ್ನು ಮುನ್ನಡೆಸುತ್ತಿರುವ ಅಂಬಿಗನಿಗೆ ಹೋಲಿಕೆ ಮಾಡೋಣವೇ. ಹಡಗಿನಲ್ಲಿರುವ ದಿಕ್ಸೂಚಿ ಎನ್ನೋಣವೇ? ಅಥವಾ ಸಾಗರವೇ ಈಕೆ ಎನ್ನೋಣವೇ? ಅಥವಾ ಕುಟುಂಬದ ಕೇಂದ್ರ ಬಿಂದುವೇ ಸ್ತ್ರೀ ಎನ್ನೋಣವೇ? ●

# ಕನಸುಗಳು ನನಸಾಗುವ
# ಹೊಸ ಭರವಸೆಯ
# ಶ್ರೀ ಹೇಮಲಂಬಿ ಸಂವತ್ಸರ
# ನಮ್ಮದಾಗಲಿ



## ಯುಗಾದಿ ಹಬ್ಬದ ಆತ್ಮೀಯ ಶುಭಹಾರೈಕೆಗಳು




**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**
ವಿರೋಧಪಕ್ಷದ ಮುಖ್ಯ ಸಚೇತಕರು
ಕರ್ನಾಟಕ ವಿಧಾನ ಪರಿಷತ್ತು

/ ganeshkarnik

**ಕೊಠಡಿ ಸಂಖ್ಯೆ:** 144, 145, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560001 | 080-22253722, 22033858
**ನಿವಾಸ:** 204, ಶಾಸಕರ ಭವನ, ಬೆಂಗಳೂರು – 560001 | 080-22359211
**ಕ್ಷೇತ್ರ ಕಛೇರಿ:** ಜಿಲ್ಲಾಧಿಕಾರಿ ಕಛೇರಿ ಆವರಣ, ಮಂಗಳೂರು – 575001

**ಫ್ಯಾಕ್ಸ್:** 080-22253722 | **ಇ-ಮೇಲ್:** captkarnik@gmail.com | **ವೆಬ್‌ಸೈಟ್:** ganeshkarnik.net

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-04-2017 Date of Posting 20th or 21st of every month

# ಕ್ಯಾಲೆಂಡರ್ ಬಿಡುಗಡೆ





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಘಟಕಗಳು ಜಂಟಿಯಾಗಿ ದಿನಾಂಕ 12.4.2017ರಂದು ಸಂಜೆ 4.30 ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ಹೊಸವರ್ಷದ ಪಾಕೆಟ್ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವು ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಸುರೇಂದ್ರರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳನ್ನು ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಎಸ್.ಜಿ ತಾಂಬೆಯವರು ಪರಿಚಯಿಸಿ, ಸ್ವಾಗತಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಖಜಾಂಚಿಗಳಾದ ಶ್ರೀ ಜೆ.ಎಂ ಜೋಶಿಯವರು ಸಂಘವು ನಡೆದು ಬಂದ ದಾರಿಯ ಬಗ್ಗೆ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು.

ಹೊಸ ವರ್ಷದ ಕ್ಯಾಲೆಂಡರ್‌ನ್ನು ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯರಾದ ಶ್ರೀ ಸಪ್ತಗಿರಿಗೌಡ, ಅಧ್ಯಕ್ಷರು, ಬಿಜೆಪಿ ಯುವ ಮೋರ್ಚಾ ಬೆಂಗಳೂರು, ಸಂಘದ ಪೋಷಕರಾದ ಶ್ರೀ ಹೆಚ್.ನಾಗಭೂಷಣರಾವ್, ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಶಿವಾನಂದ ಸಿಂಧನಕೇರಾ ಮತ್ತು ಶ್ರೀ ಜೆ.ಎಂ. ಜೋಶಿ ಅವರುಗಳು ಬಿಡುಗಡೆಗೊಳಿಸಿದರು.

ಮುಖ್ಯ ಅತಿಥಿಗಳಾದ ಹೆಚ್. ನಾಗಭೂಷಣರಾವ್ ಅವರು ಹೊಸವರ್ಷ ಯುಗಾದಿಯ ಮಹತ್ವ ಕುರಿತು ವಿವರವಾಗಿ ತಿಳಿಸಿದರು. 'ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಘಟಕಗಳು ಪ್ರತಿಭಾ ಪುರಸ್ಕಾರ ಮತ್ತು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮಗಳನ್ನು ತಪಸ್ಸಿನ ಹಾಗೆ ಚಾಚೂ ತಪ್ಪದೇ ಮಾಡಿಕೊಂಡು ಬರುತ್ತಿದೆ, ವೈಜಾನಿಕವಾಗಿ ಯುಗಾದಿಯೇ ಹೊಸವರ್ಷ. ಇದನ್ನು ಶಿಕ್ಷಕರಾದ ನಾವು ಮಕ್ಕಳಲ್ಲಿ ಮನದಟ್ಟುಮಾಡಬೇಕು. ಪೋಷಕರೂ ಮಕ್ಕಳಲ್ಲಿ ಇದರ ಬಗ್ಗೆ ಅರಿವು, ತಿಳುವಳಿಕೆ ನೀಡಿದರೆ ಮುಂದಿನ ಪೀಳಿಗೆಗೆ ಸಂಸ್ಕೃತಿ ಹರಿದು ಸಮೃದ್ಧ ರಾಷ್ಟ್ರವಾಗಿ ಉಳಿಯುವುದರಲ್ಲಿ ಸಂಶಯವಿಲ್ಲ ಮತ್ತು ಈ ಯುಗಾದಿ ಸಂದೇಶವನ್ನು ಹೇಗೆಲ್ಲಾ ಸಂಬಂಧಿಕರಲ್ಲಿ, ಬಂಧು ಬಾಂಧವರಲ್ಲಿ, ಸ್ನೇಹಿತರಲ್ಲಿ ಸಾರಬಹುದು' ಎಂದೂ ತಿಳಿಸಿದರು. ಶ್ರೀ ಸಪ್ತಗಿರಿಗೌಡರು ಮಾತನಾಡಿ 'ಕ್ರೈಸ್ತರ ಕ್ಯಾಲೆಂಡರ್ ಬಿಟ್ಟು ಭಾರತೀಯ ಸಂಸ್ಕೃತಿಯ ಪ್ರಕಾರ ನೀವು ಯುಗಾದಿಯಿಂದ ಯುಗಾದಿಗೆ ಕ್ಯಾಲೆಂಡರ್ ಮಾಡುತ್ತಿರುವುದಕ್ಕೆ ತಮಗೆ ಧನ್ಯವಾದಗಳು, ನಾವು ವಿಶ್ವಗುರು ಆಗಬೇಕಾಗದರೆ ನಮ್ಮ ತನವನ್ನು ನಾವು ಪಾಲಿಸಬೇಕು ಎಂದು ಕರೆಕೊಟ್ಟರು, ಶಿಕ್ಷಕರು, ಪೋಷಕರು ಮಕ್ಕಳಿಗೆ ನಮ್ಮ ಸಂಸ್ಕೃತಿ ಬಗ್ಗೆ ಪ್ರೋತ್ಸಾಹಿಸಬೇಕು' ಎಂದು ನುಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಶಿವಾನಂದ ಸಿಂಧನಕೇರಾರವರು ಮಾತನಾಡಿ 'ಶಿಕ್ಷಕರಲ್ಲಿ ಆತ್ಮ ವಿಶ್ವಾಸ ಹೆಚ್ಚಬೇಕು. ವಿದ್ಯಾರ್ಥಿಗಳಲ್ಲಿ ನಮ್ಮ ಭಾರತೀಯ ಸಂಸ್ಕೃತಿಯ ಬಗ್ಗೆ ತಿಳುವಳಿಕೆ ಮೂಡಿಸಿ ಅವರಲ್ಲಿ ದೇಶಭಕ್ತಿಯನ್ನು ಹೆಚ್ಚಿಸಬೇಕೆಂದು' ತಿಳಿಸಿದರು. ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪ ಇವರು ವಂದನಾರ್ಪಣೆಯನ್ನು ಮಾಡಿದರು. ಬೆಂಗಳೂರು ದಕ್ಷಿಣ ಜಿಲ್ಲೆ ಕಾರ್ಯದರ್ಶಿಯಾದ ಶ್ರೀಮತಿ ವಾಸುಕಿಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು.





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಧಾರವಾಡ ಹಾಗೂ ರಾಮನಗರ ಜಿಲ್ಲಾ ಘಟಕಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸಿದವು.

**IF UNDELIVERED**
**PLEASE RETURN TO SENDER**

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

### ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com